# ಅಂಶ - 13 ಆಧುನಿಕ ಕಥೆ

**ವಿಷಯುಕ್ರಮ**


13.0 ಉದ್ದೇಶ
13.1 ಪೀಠಿಕೆ
13.2 ಪಠ್ಯ-1
13.2.1 ಪಠ್ಯ — 1ರ ವಿಶ್ಲೇಷಣೆ
13.2.2 ಪಠ್ಯ — 1 ನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗುವ ಅಂಶಗಳು
13.3.3 ಪಠ್ಯ — 1ರ ಪ್ರತಿಮೆ ಮತ್ತು ಸಂಕೇತಗಳು
13.3 ಪಠ್ಯ-2
**ಅಭ್ಯಾಸ - 1**
13.4 ಸಾರಾಂಶ
**ಅಭ್ಯಾಸಗಳಿಗೆ ಉತ್ತರಗಳು**


## 13.0 ಉದ್ದೇಶ

- ಆಧುನಿಕ ಕಥೆಗಳ ಸ್ವರೂಪವನ್ನು ಅರಿಯುವಿರಿ.
- ಕಥೆಗೆ ಪೂರಕ ಅಂಶಗಳಾದ, ಪ್ರತಿಮೆ, ರೂಪಕ ಮುಂತಾದವುಗಳನ್ನು ಅರ್ಥಮಾಡಿಕೊಳ್ಳುವಿರಿ.
- ಕಥೆಯ ಬೆಳವಣಿಗೆಯ ರೂಪವನ್ನು ತಿಳಿಯುವಿರಿ.
- ಕಥೆಯಲ್ಲಿ ಆರಂಭ, ಬೆಳವಣಿಗೆ ಮತ್ತು ಮುಕ್ತಾಯ ಇವುಗಳ ಸ್ವರೂಪವನ್ನು ತಿಳಿಯುವಿರಿ.
- ಕಥೆಯ ವಿವಿಧ ಅಂಶಗಳನ್ನು ಬೆಳೆಸುವ ರೀತಿಯನ್ನು ಮನಗಾಣುವಿರಿ.

## 13.1 ಪೀಠಿಕೆ

1950ರ ನಂತರದ ಕನ್ನಡ ಸಾಹಿತ್ಯ ಒಂದು ಹೊಸ ದಿಕ್ಕಿನೆಡೆಗೆ ಚಲಿಸಲು ಪ್ರಾರಂಭ ಮಾಡಿತು. ಕಲೆಯ ಸಾಧ್ಯತೆಗಳ ಹೊಸ ಹುಡುಕಾಟ, ಕಥೆ ಹೇಳುವ ರೀತಿ ಅದಕ್ಕಾಗಿ ಹೊಸ ಭಾಷೆ, ಹೊಸ ಸಂವೇದನಾ ರೀತಿಯನ್ನು ಕಂಡುಕೊಳ್ಳಬೇಕಾಯಿತು. ಕವನ ಮತ್ತು ಕಥೆ ಹೇಳುವುದರಲ್ಲಿ ಬಿಗಿ ಜಾಸ್ತಿಯಾಯಿತು. ಕಥೆಯಲ್ಲಿ ಘಟನಾ ಸರಣಿಗಳನ್ನು ಬಿಟ್ಟು, ಪ್ರತಿಮಾ ವಿಧಾನವನ್ನು ಬಳಸಿಕೊಂಡರು. ಕವನದ ಗುಣವನ್ನು ಕಥೆ ಹೇಳುವಲ್ಲಿಯೂ ಕಸಿ ಮಾಡಿದರು. ಇದಕ್ಕೆ ಉತ್ತಮ ಉದಾಹರಣೆ ಯಶವಂತ ಚಿತ್ತಾಲರ 'ಆಟ'.

## 13.2 ಪಠ್ಯ-1

### ಆಟ

ಎಂದಿನಂತೆಯೇ, ದೀಪ ಹಚ್ಚುವ ಹೊತ್ತಿಗೆ ಊಟವನ್ನು ಮುಗಿಸಿ, ಊರ ಇನ್ನೊಂದು ಕೊನೆಯಲ್ಲಿದ್ದ ಮೊಮ್ಮಗಳ ಮನೆಗೆ ಹೊರಟು ನಿಂತ ಬುಡಣಸಾಬರು ಒಳಗೆ ಅಡುಗೆಮನೆಯಲ್ಲೆಲ್ಲೊ ಕೆಲಸದಲ್ಲಿ ತೊಡಗಿದ್ದ ಮೊಮ್ಮಗನ ಹೆಂಡತಿಯನ್ನು ಕರೆದು, ''ಚಾಂದಬೀಬೀ, ಕದ ಅಡ್ಡ ಮಾಡಿಕೋ. ಫಾತಿಮಾಳ ಮನೆಗೆ ಹೋಗಿ ಬರುತ್ತೇನೆ'', ಎಂದು ಹೇಳಿ, ಅವಳ ಉತ್ತರದ್ದಾಗಲೀ ಬರಪಿನದಾಗಲೀ ಹಾದಿ ಕಾಯದೆ, ಕೈಯಲ್ಲೆತ್ತಿಕೊಂಡ ಉದ್ದನ್ನ ಬಿದಿರಿನ ದೊಣ್ಣೆಯನ್ನೂರುತ್ತ ಮೆಲ್ಲನೆ ಜಗಲಿಯ ಮೆಟ್ಟಲಿಳಿದು ಅಂಗಳಕ್ಕೆ ಬಂದದ್ದೇ, ಹೊರಗೆ ಹೊತ್ತಿಗೆ ಮೊದಲೇ ಕವಿದ ಕತ್ತಲೆ ನೋಡಿ, ಆಕಾಶದತ್ತ ಕಣ್ಣೆತ್ತಿ ''ಅರೆ ಅಲ್ಲಾ'' ಎನ್ನುತ್ತಿರುವಾಗ ದೂರ ಹುಣಿಸೆಮರಗಳ ತೋಪಿನಾಚೆಯ ಗುಡ್ಡಗಳ ನೆತ್ತಿಯಲ್ಲಿ ಗುಡುಗಿನ ಸದ್ದೂ ಕೇಳಿಸಿದಂತಾಗಿ, ಈ ಅಡ್ಡ ತಿಂಗಳಲ್ಲಿ ಮಳೆ ಬರುವಂತಿದೆಯಲ್ಲಾ ಎಂದುಕೊಂಡರೂ ಅವರ ಪರಿವೆಯೇ ಇಲ್ಲದವರಂತೆ ಅಂಗಳ ದಾಟಿ ಓಣಿಯತ್ತ ಸಾಗಿದ್ದರು.

ತುಂಬ ಮುದುಕರಾದ ಬುಡಣಸಾಬರ ವಯಸ್ಸು ಆ ಹಳ್ಳಿಯಲ್ಲಿ ಸರಿಯಾಗಿ ಯಾರಿಗೂ ಸ್ವತ: ಬುಡಣಸಾಬರಿಗೂ — ಗೊತ್ತಿರಲಿಲ್ಲವಾದರೂ ಎಲ್ಲರ ಆದರ ಪ್ರೀತಿಗಳಿಗೆ ಪಾತ್ರರಾದ ಈ ಹಿರಿಯರು ಆ ಭಾಗದಲ್ಲೇ ತೀರ ಹಳೆಯರೆಂಬುದು ಎಲ್ಲರೂ ಒಪ್ಪಿದ ಮಾತು. ಅಂಗೈ ಮುಚ್ಚುವಷ್ಟು ನೀಳವಾದ ಕೈಗಳುಳ್ಳ, ಪಾದಗಳವರೆಗೂ ಮುಚ್ಚುವಷ್ಟು ಉದ್ದವಾದ ಕಪ್ಪು ನಿಲುವಂಗಿ; ಅದರ ಮೇಲೆ ಹೊಕ್ಕುಳದವರೆಗೂ ದಪ್ಪನೆ ಹರಡಿ ಬಿದ್ದ ನರೆತ ತಲೆ; ಮೀಸೆ ಗಡ್ಡಗಳಿಂದ ಇಳಿದ ಬೆಳ್ಳಗಿನ ಕೂದಲು; ನಡೆಯುವಾಗ ಆರು ಫೂಟು ಎತ್ತರವಾದ ಇವರ ಕೈಯಲ್ಲಿ ಇವರಿಗಿಂತಲೂ ಒಂದು ಮುಷ್ಟಿ ಎತ್ತರವಾದ ಬಿದಿರಿನ ಬೆತ್ತ ಪುರಾಣ ಕಾಲದ ಋಷಿಗಳಂತೆ, ಮಂತ್ರವಾದಿಯಂತೆ ಪವಾಡಪುರುಷರಂತೆ — ಒಬ್ಬೊಬ್ಬರಿಗೆ ಒಂದೊಂದು ರೀತಿಯಾಗಿ — ಕಂಡ ಬುಜಡಣಸಾಬರಿಗೆ ಆ ಹಳ್ಳಿಯಲ್ಲಿ ಇದ್ದ ಹತ್ತಿರದ ಬಳಗವೆಂದರೆ ಹಳ್ಳಿಯ ಪೂರ್ವದ ತುದಿಯಲ್ಲಿರುತ್ತಿದ್ದ ಮೊಮ್ಮಗ ಕಾಸೀಮ ಹಾಗೂ ಹಳ್ಳಿಯ ಇನ್ನೊಂದು ತುದಿಯಲ್ಲಿರುತ್ತಿದ್ದ ಮೊಮ್ಮಗಳು, ಫಾತಿಮಾ. ರಾತ್ರಿಯ ಊಟ ಮುಗಿಸಿದ್ದೇ ಕಾಸೀಮನ ಮನೆಯಿಂದ ಹೊರಬಿದ್ದವರು ಫಾತಿಮಾಳ ಮನೆಯನ್ನು ಸೇರಿ; ರಾತ್ರಿಯನ್ನು ಅಲ್ಲೇ ಕಳೆದು ಮರುದಿನ ಬೆಳಕು ಹರಿಯುವ ಮೊದಲೇ ಎದ್ದು ಪ್ರಾತರ್ವಿಧಿಗಳನ್ನು ಮುಗಿಸಿ ಪ್ರಾರ್ಥನೆಯಾದದ್ದೇ ತಿರುಗಿ ಕಾಸೀಮನ ಮನೆಗೆ ಹೊರಡುತ್ತಿದ್ದರು. ದಿನವೂ ತಪ್ಪದ ಸಂಜೆ ಬೆಳಗ್ಗೆ, ಪೂರ್ವದಿಂದ ಪಶ್ಚಿಮಕ್ಕೆ ಪಶ್ಚಿಮದಿಂದ ಪೂರ್ವಕ್ಕೆ ನಡೆಯುತ್ತಿದ್ದ ಈ ವೃದ್ಧಸಂಚಾರಗಳು ಆ ಹಳ್ಳಿಯಲ್ಲಿ ಪ್ರಸಿದ್ಧವಾಗಿದ್ದವು.

ಮುದಿ ಹೆಜ್ಜೆಗಳನ್ನಿಡುತ್ತ ಹಿತ್ತಿಲ ದಣಪೆ ದಾಟಿದ ಬುಡಣಸಾಬರು ಬಡಕೂ ಬೇಣವನ್ನು ಕಳೆದು ರಸ್ತೆ ಸೇರಿ, ಪೇಟೆಗೆ ಬರುವ ಹೊತ್ತಿಗೆ ಅಂಗಡಿಗಳಲ್ಲೆಲ್ಲ ದೀಪ ಹಚ್ಚುವ ಅವಸರ ಕಂಡುಬಂದಿತು. ದೊಡ್ಡ ಅಂಗಡಿಯ ಮಹದೇವಶೆಟ್ಟಿ ಹೊಸತಾಗಿ ತಂದ ಗ್ಯಾಸಬತ್ತಿಯನ್ನು ಪಂಪು ಹೊಡೆಹೊಡೆದು ಬೆಳಗಿ ಸುತ್ತಿದ್ದಂತೆ, ಮಳೆ ಬರುವ ಲಕ್ಷಣ ಕಂಡರೂ ಹಾಯಾಗಿ ಮನೆಯಲ್ಲಿ ಕೂಡುವುದನ್ನು ಬಿಟ್ಟು ಹೊರಗೆ ಬಿದ್ದ ಬುಡಣಸಾಬರನ್ನು ಕಂಡು, ''ಮೊಮ್ಮಗಳ ಮನೆಗೆ ಹೊರಟಂತಿದೆ ಬುಡಣಸಾಬರು. ಮಳೆ ಬರುತ್ತಿದೆಯೊ ಏನೋ, ಕೊಡೆಯಿಲ್ಲದೇ ಹೊರಟುಬಿಟ್ಟಿರಲ್ಲಾ'' ಎಂದಾಗ, ಬರಿಯೆ ನಕ್ಕ ಬುಡಣಸಾಬರ ಬೆಳ್ಳಗಿನ ಗಡ್ಡ ಮೀಸೆಗಳ ನಡುವೆ ಮಿಂಚಿದ, ಇನ್ನೂ ಗಟ್ಟಿಯಾಗೆ ಉಳಿದ ಹಲ್ಲುಗಳ ಸಾಲುಗಳಿಂದ ಸುಖಪಟ್ಟು, ಆಗಲೇ ಭುಗ್ ಎಂದು ಶುಭ್ರವಾಗಿ ಹೊತ್ತಿಕೊಂಡ ಗ್ಯಾಸ್ ಬತ್ತಿಯನ್ನೆತ್ತಿ ಅಂಗಡಿಯ ಮಾಡಿಗೆ ತೂಗಹಾಕುತ್ತಿದ್ದಾಗ ಬುಡಣಸಾಬರು ಮುಂದೆ ನಡೆದರು. ಪೇಟೆಯನ್ನು ಹಿಂದೆ ಹಾಕಿ, ದೇವತೀ ದೇಗುಲದತ್ತ ಹೊರಳುವಾಗ ರಸ್ತೆಯ ಮುರುಕಿಯಲ್ಲಿ ನಿಂತ, ಗೋಡೆಗಳ ಮೇಲೆಲ್ಲ ಸಣ್ಣ ಬೆಟ್ಟಗಳಂತಹ ಒರಲೆಯ ಹುತ್ತಗಳನ್ನು ಬೆಳೆಯಿಸಿಕೊಂಡ ಆ ಹಳೆಮನೆಯ ಮುದುಕ ಸದಾಶಿವರಾಯ ಎಂದಿನಂತೆಯೇ ದಣಪೆಯ ಕಲ್ಲಿನ ಮೇಲೆ ಕೂತಿರದಿದ್ದುದನ್ನು ಕಂಡು ಮುದುಕ ಮಳೆಗೆ ಹೆದರಿರಬೇಕು ಎಂದುಕೊಂಡು, ಮುಂದೆ ಸಾಗಿ, ಗುಡಿ ತಲುಪುವುದರೊಳಗೆ ಒಂದೆರಡು ಮಳೆಯ ಹನಿಗಳು ಮೈಮೇಲೆ ಉದುರಿದಂತಾದರೂ ಹೆಜ್ಜೆಯ ವೇಗವನ್ನು ಹೆಚ್ಚಿಸದೇ ಗುಡಿಯಿದ್ದ ಹಿತ್ತಲ ಮೂಲೆಯಲ್ಲಿ ನಾಗಸಂಪಿಗೆ ಮರದ ಮರೆಯಲ್ಲಿದ್ದ ಬಾವಿಯಿಂದ ಪೂಜೆಗಾಗಿ ನೀರು ಸೇದುತ್ತಿದ್ದ ಗುನಗನ ಬೆನ್ನಬದಿಯನ್ನು ನೋಡುತ್ತ ನಿಂತವರು, ತಾವು ನಿಂತದ್ದಾರೂ ಯಾಕೆ ಎಂದು ತಾವೇ ಆಶ್ಚರ್ಯಪಟ್ಟವರಂತೆ ಗುನಗ ತಮ್ಮತ್ತ ತಿರುಗುವ ಕ್ಷಣವನ್ನು ಕಾಯದೆ, ಮತ್ತೆ ಮುಂದೆ ನಡೆದರು. ಶಂಕರರಾಯರ ಹಿತ್ತಲು, ಪಟೇಲರ ಹಿತ್ತಲುಗಳನ್ನು ದಾಟಿ, ಮಸಕುಮಸಕಾದ ಹಳದಿಬಣ್ಣದ ಬೆಳಕನ್ನು ತೂರುವ ಕಾಚಿನ ಬುರುಡೆಯ ದೀಪ ತೂಗುತ್ತಿದ್ದ ಏಕನಾಥಶೆಟ್ಟಿಯ ಅಂಗಡಿಗೆ ಬರುವುದರೊಳಗೆ ಗುಡುಗಿನ ದೊಡ್ಡ ಸದ್ದೂ ಕೇಳಿಸಿದಾಗ, ನಡಿಗೆಯ ವೇಗವನ್ನು ತುಸು ಹೆಚ್ಚಿಸಿ, ಮೊಮ್ಮಗಳ ಮನೆಯ ಕಡೆ ಹೊರಳುವ ಓಣಿಯ ಬಾಯಲ್ಲಿ ನಿಂತ ನರಸಿಂಹನ ಅಂಗಡಿಗೆ ಬರುವಷ್ಟರಲ್ಲಿ ಉಬ್ಬಸ ಹತ್ತಿದಂತಾಗಿ, ತಡೆದು, ಅಂಗಡಿಯತ್ತ ನೋಡುತ್ತ, ಅಂಗಡಿಯಲ್ಲಿ ದೀಪವಿಲ್ಲದ್ದನ್ನು ಕಂಡು, ಇದು ಹೇಗೆ ಎಂದುಕೊಂಡು ಕಣ್ಣರಳಿಸಿ, ಹುಡುಗ ಈವತ್ತು ಅಂಗಡಿಯನ್ನು ಇಷ್ಟು ಬೇಗ ಹೇಗೆ ಮುಚ್ಚಿದ? ಎಂದೂ ಹೀಗೆ ಮಾಡಿದವನಲ್ಲ ಎಂದು ಕ್ಷಣಹೊತ್ತು ಅಸ್ವಸ್ಥಗೊಂಡು, ಓಣಿಯಲ್ಲಿ ಕಾಲಿರಿಸುವ ಹೊತ್ತಿಗೆ ಎರಡೂ ಬದಿಯ ಹಿತ್ತಲುಗಳಲ್ಲಿ ದಟ್ಟವಾಗಿ ಬೆಳೆದು ನಿಂತ ಎತ್ತರವಾದ ಮರಗಳಿಂದಾಗಿ, ಆಕಾಶದಲ್ಲಿ ಕವಿದ ಮೋಡಗಳಿಂದಾಗಿ, ಓಣಿಯಲ್ಲಿ ಮುತ್ತಿನಿಂತ ಕತ್ತಲೆಯಲ್ಲಿ ಏನೇನೋ ಕಾಣಿಸಿದಂತಾಗಿ, ದಾರಿ ತಪ್ಪಿದೆವೊ ಎಂದುಕೊಳ್ಳುವಷ್ಟರಲ್ಲಿ 'ಸಳ್' ಎಂದು ಮಿಂಚಿದ ಸಿಡಿಲಿದ ಧಾರೆ ಹಾವಿನಂತೆ ಬಳುಕಿ ಡೊಂಕಾಗಿ ಹರಿದ ಚಿರಪರಿಚಿತವಾದ ದಾರಿಯ ಮೇಲೆ ಕ್ಷಣಕಾಲ ಚೆಲ್ಲಿ ಕಣ್ಣು ಮುಚ್ಚಿತು : ದೂರ, ಮನವೇಲನ ದಣಪೆಯ ಇದಿರು, ಗದ್ದೆಗೆ ಗೊಬ್ಬರ ಸಾಗಿಸಲು ಉಪಯೋಗಿಸುತ್ತಿದ್ದ ಹರಕು ಮುರಕು ಚಕ್ಕಡಿಯೊಂದು ದಿಕ್ಕಿಲ್ಲದೆ ಬಿದ್ದಿತ್ತು. ಅದಕ್ಕೂ ಮುಂದೆ, ಉತ್ತುಮಿಯ ಹಿತ್ತಿಲ ದಣಪೆಯೊಳಗಿಂದ ಹೊರಬಿದ್ದ ಕರ್ರಗಿನ ನಾಯಿಯೊಂದು ಮಿಂಚಿಗೆ ಹೆದರಿ, ಬಾಲವನ್ನು ಕುಂಡೆಯಲ್ಲಿ ಸಿಕ್ಕಿಸಿ, ಪರಮೇಶ್ವರಿಯ ಮನೆಯತ್ತ ಓಡುತ್ತಿದ್ದುದೂ ಕಣ್ಣಿಗೆ ಬಿತ್ತು. ಅದಕ್ಕೂ ಆಚೆ ಕೈತಾನನ ಮನೆಯವರೆಗೂ ಕ್ಷಣಕಾಲ ಕಾಣಿಸಿಕೊಂಡು

ಮತ್ತೆ ಕತ್ತಲೆಯಲ್ಲಡಗಿ, ಹೊಂಚುಹಾಕಿದ ಹಾಗೆ ತೆಪ್ಪಗೆ ಬಿದ್ದ ನೀರಾದ ಓಣಿಯಲ್ಲಿ ಇನ್ನೊಂದು ನರಪ್ರಾಣಿ ಇರಲಿಲ್ಲ : ಮೈಮೇಲೆ ಮುಳ್ಳು ನಿಂತವು. ಎಂದೋ ಯಾವಾಗಲೋ ಸತ್ತು ಹೋದ ಗೆಳೆಯರು, ಮಕ್ಕಳು, ಹಿರಿಯ್ದರು ಯಾರುಯಾರೆಲ್ಲ ನೆನಪಿಗೆ ಬಂದು ತಲ್ಲಣಗೊಂಡು ಅಧೀರ ಹೆಜ್ಜೆ ಇಡುತ್ತ ಮನವೇಲನ ಹಿತ್ತಲ ದಣಿವೆ ತಲುಪುವುದರೊಳಗೆ, ಬೆನ್ನ ಹಿಂದುಗಡೆಯಲ್ಲಿ ಯಾರೋ 'ಅಲಲ ಲಲಲ ಕೀೞ ಹಾ' ಎಂದು ಒಳಗಿನ ಹುರುಪಿಗಿಂತ ಹೆಚ್ಚಾಗಿ ಕತ್ತಲೆಯಲ್ಲಿ ಹೋಗುವಾಗ ಪಟ್ಟ ಭೀತಿಯನ್ನು ಕಳೆದುಕೊಳ್ಳಲೆಂಬಂತೆ ಒದರುತ್ತ ಓಡೋಡುತ್ತ ಬರುವ ಹೆಜ್ಜೆಯ ಸಪ್ಪಳ ಕೇಳಿ, ತಡೆದಾಗ, ಕತ್ತಲೆಯಲ್ಲಿ ಅವರನ್ನು ಸಮೀಪಿಸುತ್ತಿದ್ದವನು, ''ಇದೇ! ಬುಡಣಸಾಬರೋ ನೋಡ್ತೆ. ದೂರದಿಂದ ಯಾರೆಂದು ತಿಳಿಯದೆ ಎದೆಯಲ್ಲಿ ಧಸ್ ಆಯ್ತು ನೋಡಿ. ಇನ್ನೂ ಇಲ್ಲೇ ಇದ್ದೀರಲ್ಲ. ಪೇಟೆಯಲ್ಲಿ ನಿಮ್ಮನ್ನು ಯಾವಾಗ ನೋಡಿದ್ದೆ. ನಾನು ನಾಗೇಶ, ಪರಶುರಾಮಭಟ್ಟರ ಮಗ. ನರಸಿಂಹ ಆಡಲಿಕ್ಕೆ ಬಾ ಎಂದು ಹೇಳಿಕಳುಹಿಸಿದ್ದ. ಹಾಗೆಂದೇ ಹೊರಟೆ. ಬೇಗ ಬೇಗ ಹೆಜ್ಜೆ ಹಾಕಿ. ನಿಮ್ಮ ಹತ್ತಿರ ಕೊಡೆಯೂ ಇಲ್ಲ'', ಎಂದು ಒಂದೇ ಉಸಿರಿನಲ್ಲಿ ಅಂದವನೇ ಮುದುಕನ ಮಾತಿನ ದಾರಿ ಕಾಯದೇ, ಅವಸರ ಅವಸರವಾಗಿ ಅಲ್ಲಿಂದ ನಡದೇ ಬಿಟ್ಟ. ಅವನು ಕಾಣದಾದದ್ದೇ ಓಣಿಯಲ್ಲಿಯ ಕತ್ತಲೆ ಒಮ್ಮೆಲೇ ದಟ್ಟವಾದಂತೆ ಎಲ್ಲವೂ ನಿಶ್ಶಬ್ದವಾದಂತೆ ಭಾಸವಾಗಿ, ಬುಡಣಸಾಬರ ಮೈ 'ಶಿರ್' ಎಂದು, ತಿರುಗಿ ನವಿರಿಗೊಳಗಾದಾಗ ತಾವೇ ದಿಗಿಲುಪಟ್ಟು ಎಲ್ಲ ಬಿಟ್ಟು ಇಸ್ಪೀಟಿನ ತಲಬಗೆ ಅಂಗಡಿಯನ್ನು ಇಷ್ಟು ಬೇಗ ಮುಚ್ಚಿದನೋ ಎಂದು ಕಳವಳಿಸುತ್ತ ಮನವೇಲನ ದಣಪೆ ದಾಟುತ್ತಿದ್ದಾಗ ಮನೆಯ ಜಗಲಿಯ ಮೇಲೆ ಕಂದೀಲಿನ ಬೆಳಕನ್ನು ನೋಡಿ ಅಷ್ಟರಲ್ಲೇ ಸಮಾಧಾನಪಟ್ಟು, ಇಲ್ಲೆಲ್ಲೋ ಚಕ್ಕಡಿ ಇದ್ದುದು ನೆನಪಿಗೆ ಬಂದು, ಅದಕ್ಕೆ ಎಡವಬಾರದೆಂಬಂತೆ ಬದಿಗೆಸರಿದು, ಬೆತ್ತವೂರಿ ತಡವುತ್ತ ಉತ್ತುಮಿಯ ಹಿತ್ತಲನ್ನು ಕಳೆಯುವಷ್ಟರಲ್ಲಿ ಹಿಂದಿನಿಂದ ಯಾರೋ, 'ರಾಜರ್ ರಾಜನು ಬಂದಾ ' ಎಂದು ಹುರುಪಿನಿಂದ ರಾಗ ಎಳೆದು ಹಾಡುತ್ತ ಬಂದವನು, ಮನವೇಲನ ದಣಪೆಯ ಇದಿರು ಏನನ್ನೋ ಯಾರನ್ನೋ ಶಪಿಸುತ್ತ, ಓಡೋಡುತ್ತಾ ಬುಡಣಸಾಬರನ್ನು ದಾಟುತ್ತಿರುವಾಗ ನಡಿಗೆಯ ವೇಗಕ್ಕೆ ತಡೆಹಾಕಿ, ''ಓಹೋಹೋ ಬುಡಣಸಾಬರು. ತ್ವರೆಮಾಡಿ, ತ್ವರೆಮಾಡಿ. ಅಂತಿಂಥಾ ಮಳೆ ಬರೂದಿಲ್ಲ ಮಾರಾಯರೇ, ಏನು ಕಟಕಟಾಟ, ಝುಗಝುಗಾಟ ನೋಡಿ. ಈ ತಿಂಗಳಲ್ಲಿ ಇಂಥ ಮಳೆ ಬಂದದ್ದು ನಿಮಗಾದರೂ ನೆನಪುಂಟೆ ಸಾಬರೇ? ಓ ನಾನೋ? ಮಾಧವ ಕೇಶವ ಪೈರ ಮಗ. ನರಸಿಂಹನ ಮನೆಗೆ ಹೊರಟೆ, ಆಟಕ್ಕೆ. ಬಾ ಎಂದು ಹೇಳಿ ಕಳಿಸಿದ್ದ. ಆ ಮನವೇಲನ ದಣಪೆ ಮುಂದೆ ಮಾರಾಯರೇ, ಗಾಡಿಯ ಹಗ್ಗ ಎಂದು ಕಾಣ್ದದೆ ಮೆಟ್ಟಿಬಿಟ್ಟೆ. ಏನೋ ಎಂತ ತಿಳಿದು ಜಿಗಿದುಬಿದ್ದೆ ನೋಡಿ'', ಎಂದವನೆ ಮೈಯಲ್ಲಿ ಮತ್ತೆ ಹುರುಪು ಹೊಕ್ಕವನಂತೆ, ಬಯಲಾಟದೊಳಗಿನ ವೇಷದಂತೆ ಕುಣಿಯುತ್ತ ಅಲ್ಲಿಂದ ಓಟ ಕಿತ್ತ. ಅವನ ಹುರುಪು ಬುಡಣಸಾಬರಲ್ಲೂ ಹೊಕ್ಕಿತೆಂಬಂತೆ ನಡಿಗೆಯ ವೇಗ ತುಸು ಹೆಚ್ಚಿಸಿದರು. ಪರಮೇಶ್ವರಿ, ಸಣ್ಣಪ್ಪನಾಯ್ಕರ ಹಿತ್ತಲುಗಳನ್ನು ದಾಟಿ, ನರಸಿಂಹನ ಹಿತ್ತಲ ದಣಪೆಗೆ ಬಂದಾಗ ತಡೆದರು. ಕತ್ತಲು ಕತ್ತಲಾದ ಹಿತ್ತಲದಲ್ಲಿ ಕಣ್ಣುಹಾಯಿಸಿ, ಹುಡುಕಿದರು. ದಣಪೆಯಿಂದ ದೂರವಾಗಿ ಕಪ್ಪಿನ ಗುಪ್ಪೆಯಂತೆ ನಿಂತ ಮನೆಯಲ್ಲಿ ದೀಪವಿದ್ದುದಷ್ಟೇ ಕಾಣಿಸುತ್ತಿತ್ತು. ಬದಿಯ ಮನೆಯಲ್ಲಿ ಹುಡುಗರ ಭಜನೆಯ ಗಲಾಟೆ. ಹಿಂದಿನ ದೀವರ ಕೇರಿಯಲ್ಲಿ ನಾಯಿಯೊಂದು ತಡೆಯಿಲ್ಲದೇ ಬೊಗಳುತ್ತಿತ್ತು. ಓಣಿಯ ಬಲಬದಿಯ ಹಿತ್ತಲಲ್ಲಿ ಕಲಾಯಿಕಾರ ಕರೀಮಸಾಬನ ಮನೆಯಲ್ಲಿ ಪಾತ್ರೆಗಳಿಗೆ ಕಲಾಯಿ ಹಾಕುವ ಕೆಲಸ ನಡೆದಿತ್ತು. ಓಣಿಯ ಕಡೆ ಬೆನ್ನುಮಾಡಿ ನಿಂತ ಮನೆಯ ಹಿಂದಿನ ಜಗಲಿಯ ಮೇಲೆ ನೆಲದಲ್ಲಿ ಬಿಲ ತೆಗೆದು ಹುಗಿದ ಬೆಂಕಿ ಆಡಿನ ತೊಗಲಿನ ತಿದಿಯನ್ನೊತ್ತಿ ಕೆಣಕಿದಾಗ 'ಭುಸ್' ಎಂದು ಹೊರಬಂದು ಕೆಂಪು ನಾಲಗೆ ಚಾಚಿದಾಗ ಹತ್ತಿರದ ಗಿಡಮರಗಳೆಲ್ಲ ಒಮ್ಮೆ ಕೆಂಪಾಗಿ ಮರುಗಳಿಗೆ ವಿಷವೇರಿದಂತೆ ಕಪ್ಪಾದುದನ್ನು ನೋಡುತ್ತ ಮುಂದೆ ಸಾಗುತ್ತಿದ್ದಾಗ, ಆಡಲೀ ಆಡಲೀ ಆಡುವ ವಯಸ್ಸೇ ಅವರದು. ಈಗಲ್ಲದೆ ಇನ್ನು ಯಾವಾಗ ಆಡಿಯಾರು, ಎಂದುಕೊಳ್ಳುತ್ತಾ ಕೈತಾನನ ಎಣ್ಣೆಯ ಗಾಣವನ್ನು ಸಮೀಪಿಸುವ ಹೊತ್ತಿಗೆ ಇನ್ನೊಮ್ಮೆ ಮಿಂಚು ಕತ್ತಲೆಯನ್ನು ಕೊರದಾಗ, ದೂರ ಇದಿರುಗಡೆಯಿಂದ ಯಾರೋ ಉತ್ಸಾಹದ ಹೆಜ್ಜೆ ಇಡುತ್ತ ಆಗೀಗ, ಕಿವಿಯಲ್ಲಿ ಗಾಳಿ ಹೊಕ್ಕ ಮಣಕದ ಹಾಗೆ ನೆಗೆದಾಡುತ್ತ, 'ಭೋರ್ ಭೋರ್ ಭಂಗೀಭಂಗಾರಕ್ಕನ ತಂಗೀೞ'' ಎಂದು ತಮ್ಮ ಕೇರಿಯ ಕೋಳಿಗಿರಿಯಣ್ಣ ಮೊಮ್ಮಕ್ಕಳನ್ನು ಆಡಿಸುವಾಗ ಹಲ್ಲಿಲ್ಲದ ಬಾಯಿಂದ ಹಾಡುವ ಹಾಡನ್ನೇ ರಾಗವಾಗಿ ಹಾಡುತ್ತ ಕುಣಿಯುತ್ತ ಬಂದವನು ಬುಡಣಸಾಬರನ್ನು ನೋಡಿ, ನಿಲ್ಲದೇ, ''ಬುಡಣಸಾಬರೂ ಬಹಳ ಮುದುಕರು ಮಳೆಯು ಬಂದರೂ ಹೊರಗೆ ಹೊರಟರೂ'' ಎಂಬ ಗದ್ಯವನ್ನೇ ತನ್ನ ಕುಣಿತದ ಗತ್ತಿಗೆ ಸರಿಯಾಗಿ ಹಾಡುತ್ತ

''ಅತ್ಯಂತ ತರಾತುರಿಯಲ್ಲಿ ಹೊರಟಂಥ ಕೆಲಸ ಬಹಳ ಬಹಳ. ನರಸಿಂಹನ ಮನೆಗೆ ಆಟಕ್ಕೆ ಹೊರಟವನಾಗಿದ್ದಂಥ ನನ್ನನ್ನು ಯಾರೂ ತಡೆಯಬೇಡಿರೋ '' ಎಂದು ಯಕ್ಷಗಾನದ ಧಾಟಿಯಲ್ಲರುಹಿ ಥೈ ಥೈ ಥೈ ಎನ್ನುತ್ತ ಅಲ್ಲಿಂದ ಕಾಲ್ತೆಗೆದಾಗ ಬುಡಣಸಾಬರಿಗೆ ನಗು ಬಂದುಬಿಟ್ಟಿತು. ಸಾಂತಯ್ಯರ ಸರ್ವೋತ್ತಮ ಎಂದು ತೋರುತ್ತದೆ. ಇನ್ನೂ ಹುಡುಗುತನ ಬಿಟ್ಟಿಲ್ಲ ಎಂದುಕೊಂಡು ಕೈತಾನನ ಗಾಣದಿಂದ ಇಡುಗಿದ ಎಣ್ಣೆಯ ವಾಸನೆಗೆ ಮೂಗಿನ ಹೊರಳೆ ಅರಳಿಸುತ್ತ ಮುಂದೆ ಸಾಗುತ್ತಿದ್ದಾಗ, ಓಣಿಯ ತುದಿಯಲ್ಲಿ ರಾಜರಸ್ತೆಯ ಆ ಮಗ್ಗುಲಲ್ಲಿ ನಿಂತ ಗಣಪಯ್ಯರ ಅಂಗಡಿಯ ಲಾಟೆನಿನ ಮಂದ ಬೆಳಕಿನ ಹಿನ್ನೆಲೆಯಲ್ಲಿ ಓಡಿ ಬರುತ್ತಿದ್ದ ಯುವಕನೊಬ್ಬ, ''ಸೋ ಮಳೆ ಬಂತೋ ಮಳೆ ರಾಯ ಕೊಡೆ ತಾರೋ ಸುಬ್............... '' ಎಂದು ಬುಡಣಸಾಬರನ್ನು ಕಂಡು ಹಾಡಿಗೆ ತಡೆ ಹಾಕಿದವನು ಗಣಪಯ್ಯರ ತಮ್ಮನ ಮಗ ವಿಠ್ಠಲ ..................... ''ಎಲ್ಲಿ ನರಸಿಂಹನ ಮನೆಗೆ ಆಟಕ್ಕೆ ಹೊರಟೆಯೋ'' ಎಂದು ನಗುತ್ತ ಕೇಳಿದ ಬುಡಣಸಾಬರ ಪ್ರಶ್ನೆಗೆ ಇವರಿಗೆ ಹೇಗೆ ತಿಳಿಯಿತಪ್ಪ ಎಂದು ತಬ್ಬಿಬ್ಬಾದ ವಿಠ್ಠಲ, ''ದೊಡ್ಡಪ್ಪನಿಗೊಂದು ಹೇಳಬೇಡಿ ಮಾರಾಯರೇ ದಮ್ಮಯ್ಯ. ಮಧ್ಯಾಹ್ನ ಅಂಗಡಿ ಬಂದುಮಾಡಿ ಗೋಕರ್ಣಕ್ಕೆ ಹೋಗಿದ್ದನಂತೆ ನರಸಿಂಹ. ಸಂಜೆ ಹಿಂತಿರುಗಿ ಬಂದದ್ದೇ ಆಟದ ಹುಕ್ಕಿ ಬಂತೆಂದು ಕಾಣುತ್ತದೆ. ಹೇಳಿ ಕಳಿಸಿದ್ದ. ಅದೇ! ಮಳೆ ಬಂದೇಬಿಟ್ಟಿತಲ್ಲ. ಬೇಗ ಬೇಗ ಹೋಗಿ ನಮ್ಮ ಅಂಗಡಿಯಲ್ಲಾದರೂ ನಿಂತುಕೊಳ್ಳಿ. ''ಎಂದವನೇ ಅಲ್ಲಿ ನಿಲ್ಲದೆ, ಆಗಲೇ ಉದುರಹತ್ತಿದ ಹನಿಗಳಿಗೆ ಕೈಗಳನ್ನೆ ತಲೆಯ ಮೇಲೆ ಕೊಡೆಯಂತೆ ಎತ್ತಿ ಹಿಡಿದು 'ಕೊಡೆ ತಾರೋ ಸುಬ್ರಾಯ ' ಎಂದು ನರಸಿಂಹನ ದಣಪೆ ತಲುಪುವತನಕವೂ ಹಾಡುತ್ತ ಕುಣಿಯುತ್ತ ದಣಪೆ ಸೇರಿ

ಕತ್ತಲೆಯಲ್ಲಿ ಪೂರಾ ಕರಗಿದ.· ದುಡು ದುಡು ಹೆಜ್ಜೆ ಹಾಡಿ ಗಣಪಯ್ಯರ ಅಂಗಡಿ ಹೊಕ್ಕು, ಅಬ್ಬಾ ಮಳೆ ಬಂದೇಬಿಟ್ಟಿತಲ್ಲ ಎಂದು ಬುಡಣಸಾಬರು ದಣಿವಾರಿಸಿಕೊಳ್ಳುವಷ್ಟರಲ್ಲಿ, ಆಗಿನಿಂದ ಹನಿಯಾಗಿ ಜಿನುಗುತ್ತಿದ್ದ ಮಳೆ ಒಮ್ಮಿಗಿಲೇ, ಧಾರೆಯಾಗಿ ಸೋ... ಎನ್ನಲು ತೊಡಗಿತು. ಇನ್ನೂ ಹತ್ತು ನಿಮಿಷ ನಡೆದರೆ ಮೊಮ್ಮಗಳ ಮನೆ. ಇಲ್ಲೇ ಇನ್ನೆಷ್ಟು ಹೊತ್ತು ಕಾಯಬೇಕೋ ಎಂದು ಆತಂಕಪಟ್ಟರು. ತಮ್ಮತ್ತ ನೋಡಿದ ಗಣಪಯ್ಯರಿಗೆ, ಈ ಅಡ್ಡ ತಿಂಗಳಲ್ಲಿ ಎಂಥ ಮಳೆ ನೋಡು ಗಣಪಯ್ಯ' ಎನ್ನುತ್ತ ಅಂಗಡಿಯ ಚಿಟ್ಟೆಯೇರಿ ಕುಳಿತು, ತಾವು ಇದೀಗ ಹಾದು ಬಂದ ಓಣಿ, ಕತ್ತಲೆ ಮಳೆಗಳಲ್ಲಿ ಕರಗುತ್ತಿದ್ದುದನ್ನು ನೋಡುತ್ತ ಓಣಿಯಲ್ಲಿ ಭೆಟ್ಟಿಯಾದ ಆ ನಾಲ್ವರ ಹುರುಪನ್ನೂ ನೆನೆಯುತ್ತ ಒಳಗೊಳಗೇ ನಗುತ್ತ· ಮಳೆ ಹೊಳವಾಗುವುದನ್ನೇ ಕಾಯುತ್ತಿದ್ದರು.

ಓಣಿಯಲ್ಲಿ ಬುಡಣಸಾಬರನ್ನು ಮೊತ್ತಮೊದಲು ಸಂಧಿಸಿದ ನಾಗೇಶ, ಹಾಡುತ್ತ ಕುಣಿಯುತ್ತಲೇ ನರಸಿಂಹನ ಅಂಗಳ ತಲುಪಿದ. '' ಮರದಿಂದಾ ಮುದಕೀ ತಿನ್ ..................'' ಎಂದು, 'ಮುದ್ಕಿ ತಿಂದಾ ' ಎಂದು ಪೂರ್ತಿಗೊಳ್ಳಬೇಕಾದ ತನ್ನ ಹಾಡಿನ ಕೊನೆಯನ್ನು, ಈ ಮನೆಯಲ್ಲಿ ಒಂದು ಮುದುಕಿ ಇದ್ದದ್ದು ನೆನಪಿಗೆ ಬಂದವನಂತೆ ಅರ್ಧಕ್ಕೆ ತಡೆದು, ನಾಲಗೆ ಕಚ್ಚಿಕೊಳ್ಳುತ್ತ ಮನೆಯ ಮೆಟ್ಟಲೇರಿದಾಗ, ನರಸಿಂಹ ಆಗಲೇ ಊಟ ಮುಗಿಸಿ ಜಗಲಿಯ ಮೇಲೆ ಚಾಪೆ ಹಾಸಿ ಇಸ್ಪೀಟು ಎಲೆಗಳ ಪೆಟ್ಟಿಗೆಗಲೆರಡನ್ನು ತಂದಿಟ್ಟು ಹರಿವಾಣವೊಂದರಲ್ಲಿ ಎಲೆ ಅಡಿಕೆ ಬೀಡಿ ಕಟ್ಟುಗಳ ಸರಂಜಾಮುವನ್ನು ಸಿದ್ಧಗೊಳಿಸಿ ಇವರು ಬರುವ ಹಾದಿಯನ್ನೇ ಕಾಯುತ್ತಿದ್ದ. ಅಡುಗೆಮನೆಯೊಳಗೆ ಇವರೆಲ್ಲರ ಸಲುವಾಗಿ ಅಜ್ಜಿಯ ಪಳಗಿದ ಕೈಯಿಂದ ಸಿದ್ಧವಾಗುತ್ತಿದ್ದ ಸಾಂಬಾರ ಅವಲಕ್ಕಿಯ, ಬಾಯಲ್ಲಿ ನೀರೂರಿಸುವ ಖಮಂಗವಾಸನೆ ಜಗಲಿಯವರೆಗೂ ಇಡುಗಿತ್ತು. ಮೆಟ್ಟಲೇರಿ ಬಂದದ್ದೇ,·'ಅಬ್ಬಬ್ಬ ಏನು ಗುಡುಗು ಎಂಥ ಮಿಂಚು', ಎಂದು ಉದ್ಗರಿಸಿದ ನಾಗೇಶ. ''ಏ ಮಿಂಚು ಅಂದ ಕೂಡಲೇ ನೆನಪಾಯಿತು ನೋಡು. ನಿಮ್ಮ ದಣಪೆಯ ಹತ್ತಿರದ ಮಾವಿನಮರದ ಕೆಳಗೊಬ್ಬ ಕರಗ್ರಿನ ಕಂಬಳಿ ಕೊಪ್ಪೆಹಾಕಿ ನಿಂತಿದ್ದ.ನೋಡು. ದಣಪೆ ಹೊಕ್ಕತಿರಬೇಕಾದರೆ ಮಿಂಚು ಝಗ್ ಎಂದಾಗ ನೋಡಿದೆ. ಎದೆ ಜಲ್ ಅಂದಿತು ನೋಡು. ಮೋರೆ ಕಾಣಲಿಲ್ಲ. ಕೊಪ್ಪೆ ಮಾತ್ರ'' ನರಸಿಂಹ ಅವನ ಕಡೆ ಹೆಚ್ಚಿನ ಲಕ್ಷ್ಯ ಕೊಟ್ಟಂತಿರಲಿಲ್ಲ. ಅಡುಗೆಮನೆಯಲ್ಲಿದ್ದ ಅಜ್ಜಿ ಮಾತ್ರ ''ಯಾರು ನಾಗೇಶನೇನೋ? ಎಂತಹ ಕತೆ ಹೇಳ್ತಿದೀಯೊ'' ಎಂದು ಕೇಳುತ್ತಿರುವಾಗಲೇ ಅಂಗಳದಲ್ಲಿ, ''ರಾಜರ್ ರಾಜನು ಬಾಂದ' ತನ್ನ ಹಾಜರಿ ಕೊಟ್ಟ ಮಾಧವ ಜಗಲಿಗೆ ಬಂದು, ಸಂಬಾರ ಅವಲಕ್ಕಿಯ ಪರಿಮಳಕ್ಕೆ ಉತ್ಸಾಹಿತನಾಗಿ, ''ವಾ! ಈ ಹೊತ್ತು ಗಡದ್ದಾಗಿ ಆಟ ಹೊಡೀಬೇಕು ನೋಡು. ಜಂಗೀ ಮಳೆಯೂ ಬತ್ದ್......... ಮಳೆ ಬಂದ ಕೂಡಲೇ ನೆನಪಾಯಿತು ನೋಡು. ನಿಮ್ಮ ಕೊಟ್ಟಿಗೆಯ ಹತ್ತಿರ ಗೊಬ್ಬರಕುಳಿ ಇಲ್ಲ? ಅಲ್ಲೊಬ್ಬ, ಮಾರಾಯ ಕಪ್ಪಗಿನ ಮನುಷ್ಯ ತಲೆಯ ಮೇಲೆ ಕಂಬಳಿಕೊಪ್ಪೆ ಹಾಕಿ ಹೀಗೆ ಕೈಕಟ್ಟಿ ನಿಂತಿದ್ದ ನೋಡು. ಮಿಂಚಿನ ಬೆಳಕಿನಲ್ಲಿ ಕಂಡಾಗ ಹೊಟ್ಟೆಯಲ್ಲಿ ಕಲ್ ಎನ್ನಿಸಿತು ನೋಡ್'' ಎಂದ ಹೆದರಿದ ದನಿಯಲ್ಲಿ.

''ಏನ್ ಏನ್ ಏನ್ ನೋಡಿದಿರೋ? ಏನ್ ಕತೆರೋ ಅದು?'' ನರಸಿಂಹನ ಅಜ್ಜಿ ಕಾತರತೆಯಿಂದ ಅಡುಗೆ ಮನೆಯಿಂದಲೇ ಕೇಳಿದಳು.

''ನಿಮ್ಮದನದ ಕೊಟ್ಟಿಗೆಯ ಹತ್ತಿರ .........................'' ಎಂದು ಮಾಧವ ಹೇಳುತ್ತಿರುವಾಗಲೇ ಜಗಲಿಗೆ ಬಂದ ಸರ್ವೋತ್ತಮ, 'ನಾನೂ ನೋಡಿದೆ. ಕಪ್ಪಗಿದ್ದಾನಲ್ಲ? ಕಂಬಳಿಕೊಪ್ಪೆ ಹಾಕಿಕೊಂಡಿದ್ದಾನಲ್ಲ? ಇಷ್ಟುದ್ದ ಮೀಸೆ ಬಿಟ್ಟಿದ್ದಾನಲ್ಲ? ಹಿತ್ತಲಲ್ಲಿ ಕಾಲಿಟ್ಟಿದ್ದೇ ಮಿಂಚು ಝಗ್ ಎಂದಾಗ ಕಂಡೆ ನೋಡು'' ಎಂದು ನಡುಗಿದ.

ನರಸಿಂಹನ ತಾಯಿ, ಅಜ್ಜಿ ಇಬ್ಬರೂ ಗಾಬರಿಗೊಂಡು ಅಡುಗೆಮನೆ ಬಿಟ್ಟು ಹೊರಗೇ ಬಂದರು. ಹೊಸತಿಲಲ್ಲಿ ನಿಂತು, ''ಯಾರ ಬಗ್ಗೆ ಮಾತಾಡ್ತೀರೋ? ಯಾರನ್ನು ನೋಡಿದಿರೋ?'' ಎಂದು ಅಜ್ಜಿ ಕೇಳುವುದಕ್ಕೂ 'ಅದೆ ಮಳೆ ಬಂದೇ ಬಿಟ್ಟಿತಲ್ಲ' ಎನ್ನುತ್ತ ಓಡೋಡಿ ಬಂದ ವಿಠ್ಠಲ ಮನೆ ಹೋಗುವುದಕ್ಕೂ ಸರಿಯಾಯಿತು. ''ಅಬ್ಬಾ! ಅಜ್ಜೀ ನನಗೆ ನೀನು ಕೆಂಪು ನೀರನ್ನು ನೀವಾಳಿಸಬೇಕು ನೋಡ್! ಹ್ಯಾಗೆ ಹೆದರಿದೆ! ಜೀವ ಇನ್ನೂ ಥರ ಥರ ಅನ್ನುತ್ತಿದೆ ನೋಡ್, ನಿಮ್ಮ ಕೊಟ್ಟಿಗೆಯ ಬಾಗಿಲಲ್ಲಜ್ಜೀ ಒಬ್ಬ ಕರಗ್ರಿನ ಮನುಷ್ಯ ಕಂಬಳೀ ಕೊಪ್ಪೆ ಹಾಕಿ, ಕೈಯಲ್ಲಿ ಸುರುಳಿ ಸುತ್ತಿದ ಹಗ್ಗ ಹಿಡಿದು ನಿಂತಿದ್ದು ನೋಡಿ ...............''

''ಅರೆ! ಯಾರಾದರೂ ಕಳ್ಳಗಿಳ್ಳ ಇರಲಿಕ್ಕಿಲ್ಲವಲ್ಲ?'' ಎಂದು ನರಸಿಂಹನ ತಾಯಿ ಗಾಬರಿಪಡಿಸಿದಾಗ, ನರಸಿಂಹ.

''ಅದ್ಯಾರಲ್ಲಮ್ಮ ಇವರು ಬರೇ ಮಕ್ಕರು. ಆಗ ನಾನು ಗೋಕರ್ಣಕ್ಕೆ ಹೋಗುವ ಮೊದಲು ಅವನು ನಮ್ಮ ಅಂಗಡಿಗೂ ಬಂದಿದ್ದ. ಹೊಲೆಯವರವನು. ಕೈಯಲ್ಲಿ ಹಗ್ಗದ ಸುರುಳಿ ಹಿಡಕೊಂಡು, ಹೆಗಲ ಮೇಲೆ ಕಂಬಳಿ ಹೊದ್ಕೊಂಡು, ಮೆಲ್ಲನೆ ಅಂಗಡಿ ಹೊಕ್ಕು ಕೆಳಜಗಲಿಯ ಮೇಲೆ ಮಾತನಾಡದೆ ಕೂತ್ಕೊಂಡ. ನಿನಗೇನು ಬೇಕೋ ಎಂತ ಕೇಳಿದೆ. ತಲೆ ಎತ್ತಲಿಲ್ಲ. ಹಗ್ಗ ಮಾರಲಿಕ್ಕೆ ಬಂದಾನೊ ಎಂತ ತಿಳಿದು, ನಮಗೆ ಹಗ್ಗ ಬೇಡ ಎಂದೆ. ಆದರೂ ಹಂದಾಡದೆ ಕುಳಿತ. ಬೇಕಾದರೆ ನಮ್ಮ ಮನೆಗೆ ಹೋಗಿ ಕೇಳು, ಶಾನುಭಾಗರ ಮನೆ ಎಂತ ಕೇಳು, ಹೇಳ್ತಾರೆ ನೋಡು ಅಂದೆ. ಮಾತನಾಡದೆ ಎದ್ದ. ಮೂಕನಿದ್ದರೂ ಇದ್ದಾನು. ರಸ್ತೆ ದಾಟಿ ಓಣಿ ಹೊಕ್ಕ. ಮುಂದೆ ಎಲ್ಲಿ ಹೋದನೋ ಗೊತ್ತಿಲ್ಲ. ಹುಚ್ಚನಿದ್ದರೂ ಇದ್ದಾನು. ಆಗ ದಾರಿ ತಪ್ಪಿ ಎಲ್ಲೋ ಹೋದವನು ಈಗ ಇಲ್ಲಿ ಬಂದು ಮುಟ್ಟಿದ್ದರೂ ಮುಟ್ಟಿದ್ದಾನು. ಮನೆ ಎಂತ ತಿಳಿದು ಕತ್ತಲೆಯಲ್ಲಿ ಕೊಟ್ಟಿಗೆಗೆ ಹೋಗಿದ್ದರೂ ಹೋಗಿದ್ದಾನು'' ಎಂದು ಆಡಲಿಕ್ಕೆಂದು ಇಸ್ಪೀಟು ಎಲೆಗಳ ಪೆಟ್ಟಿಗೆ ಬಿಚ್ಚಹತ್ತಿದ, ಗೆಳೆಯರಿಗೆ ಸಮಾಧಾನವಾದಂತಿತ್ತು: ಯಾರೂ ಮಾತನಾಡಲಿಲ್ಲ. ಅಜ್ಜಿ ಕೂಡ ಸುಮ್ಮನಿದ್ದಳು. ನರಸಿಂಹನ ತಾಯಿ ಮಾತ್ರ ಕೊಟ್ಟಿಗೆಯ ಹತ್ತಿರ ಬಂದವನು ಇಲ್ಲಿಯೂ ಬರಲಾರನಷ್ಟೆ? ಎಂದು ಅನ್ನಿಸಿದ ದುಗುಡವನ್ನು ಉಳಿದವರು ಸುಮ್ಮಗುಳಿದುದನ್ನು ನೋಡಿ, ಬಾಯಿಂದ ಆಡಿ ತೋರಿಸದೆ ಅಡುಗೆಮನೆಯಲ್ಲಿ ಅರ್ಧಕ್ಕೇ ಬಿಟ್ಟು ಬಂದ ಕೆಲಸದತ್ತ ನಡೆದಳು.

ಹೊರಗೆ, ಮಳೆ ಧಾರೆ ಹೊಯ್ಯುತ್ತಿತ್ತು. ಗುಡುಗು ಮಿಂಚುಗಳೊಂದಿಗೆ ದೊಡ್ಡ ಗಾಳಿಯೂ ಬಿಟ್ಟಿದ್ದರಿಂದ ಹಿತ್ತಲ ಮರಗಳೆಲ್ಲ ರಭಸದಿಂದ ತೂಗಿ ಹೆಗ್ಗೆಗಳು ತೂರಾಡಿ ಭೋ ಎನ್ನುಹತ್ತಿದವು. ಹೊತ್ತು ಹೋದಂತೆ ಗಾಳಿಮಳೆಗಳ ಜೋರು ಹೆಚ್ಚುತ್ತಲೇ ಹೋಯಿತು. ಕತ್ತಲೆಯಲ್ಲಿ ಒಂದೇ ಸಮನೆ ಕಣ್ಣುಮುಚ್ಚಿ ಹೊಯ್ಯುತ್ತಿದ್ದ ನೀರಿನ ಸದ್ದು ಗದ್ದಲ ಕೇಳುತ್ತ ಅಂಗಳದಲ್ಲಿ ದೃಷ್ಟಿ ನೆಟ್ಟು ಕೂತ ಅಜ್ಜಿಯ ಮನಸ್ಸು ಹಿಂದೆ ಇಂತಹದೇ ಮಳೆ ಬಂದ ದಿನಗಳನ್ನು ನೆನೆಯುತ್ತ ನೆನೆಯುತ್ತ ಇತಿಹಾಸದಿಂದ ಪುರಾಣದ ತನಕವೂ ಹೋಗಿ ತಿರುಗಿ ವರ್ತಮಾನಕ್ಕೆ ಬಂದಾಗ ಮೈನವಿರಿಗೊಳಗಾಗಿ ಕೊಟ್ಟಿಗೆಯ ಹತ್ತಿರ ಬಂದವನು, ಏನು ಮಾಡುತ್ತಿದ್ದನೋ, ಇವನೊಬ್ಬ ಹೀಗೆ ಹೇಳದೇ ಕೇಳದೇ ಇಂತಹ ವೇಳೆಯಲ್ಲಿ ಏಕೆ ಬಂದಿದ್ದಾನೋ, ಎಂದು ಆತಂಕಪಟ್ಟು ಒಮ್ಮೆಗೇ ಎದ್ದು ಜಗಲಿಯ ಮೆಟ್ಟಲಿಗೆ ಬಂದು, ಹೊರಗೆ ಹಣಕಿಕ್ಕಿ ನೋಡುತ್ತಿದ್ದಾಗ, ಕಚ್ ಎಂದು ಕತ್ತಲನ್ನು ಕಚ್ಚಿದ ಮಿಂಚು ಹಗಲಾಯಿತೆನಿಸುವಷ್ಟು ಬೆಳಕನ್ನು ಗಳಕ್ಕನೆ ಕಾರಿಸಿದಾಗ: ಅಂಗಳ, ಅದರಂಚಿನಲ್ಲಿಯ ಹಿತ್ತಲು, ಮೂಲೆಯಲ್ಲಿ ನಿಂತ ಕೊಟ್ಟಿಗೆ, ಅದರಾಚೆಯ ಓಣಿ ಎಲ್ಲ ಎಲ್ಲ ಒಮ್ಮೆ ಝುಗ್ ಎಂದು ಬೆಳಗಿ ತಿರುಗಿ ಕಪ್ಪೇರಿದಾಗ ಕಪ್ಪಾಗುವ ಮೊದಲಷ್ಟೇ ಅಂಗಳದಲ್ಲಿ ತುಳಸೀ ವೃಂದಾವನದ ಹತ್ತಿರವೇ ಫಕ್ಕನೆ ಕಂಡಂತಾದವನನ್ನು ಬಾಯಲ್ಲಿ ವರ್ಣಿಸುವದಸಾಧ್ಯವಾದಾಗ, ಜೀವಕ್ಕೆ ಹತ್ತಿದ ನಡುಕದಿಂದ ಸಾವರಿಸಿಕೊಳ್ಳುತ್ತ ರುಗಿ ಹೊಸತಿಲಿಗೆ ಬರುವ ಹೊತ್ತಿಗೆ, ಇತ್ತ ಆಟ ಒಳ್ಳೆ ರಂಗಕ್ಕೆ ಬಂದಿತ್ತು.

ಬೆಳಗುಜಾವದಲ್ಲಿ ಕಂಡ ಕನಸಿನಿಂದ ಎಚ್ಚತ್ತು ಬಡಕ್ಕನೆ ಹಾಸಿಗೆಯಲ್ಲಿ ಎದ್ದು ಕುಳಿತ ಬುಡಣಸಾಬರು, 'ಫಾತಿಮಾ ಎಂದು ಮೊಮ್ಮಗಳನ್ನು ಕೂಗಿ ಕರೆದರು. ಅಜ್ಜನ ಗಾಬರಿ ತುಂಬಿದ ಕರೆಯನ್ನು ನಿದ್ದೆಗಣ್ಣಿನಲ್ಲೇ ಕೇಳಿಸಿದಂತಾಗಿ ಎಚ್ಚರಗೊಂಡು ದಡಬಡಿಸಿ ಎದ್ದ ಫಾತಿಮಾ, ಕೋಣೆಯ ಬಾಗಿಲು ತೆರೆದು ಹೊರಗೆ ಬರುವ ಹೊತ್ತಿಗೆ ಬುಡಣಸಾಬರು ಹೊರಗೆ ಹೊರಡುವ ಸಿದ್ಧತೆಯಲ್ಲಿ ಇದ್ದುದನ್ನು ನೋಡಿ ಅಚ್ಚರಿಪಟ್ಟು, 'ಎದ್ದದ್ದೇ ಎಲ್ಲಿ ಹೊರಟಿರಿ ಅಬಾಜಾನ್? ಮೋರೆ ಕೂಡ ತೊಳೆದಿಲ್ಲ, ಪ್ರಾರ್ಥನೆಯಾಗಿಲ್ಲ, ಎಂದು ಕೇಳಿದಾಗ ''ಉಸ್ಮಾನ ಇನ್ನೂ ಮಲಗಿರಬೇಕು ಅಲ್ಲವೆ? ಎಬ್ಬಿಸಬೇಡ, ನಾನು ಈಗಲೇ ಕಾಸೀಮನ ಮನೆಗೆಹೋಗುತ್ತೇನೆ. ಪ್ರಾರ್ಥನೆಯನ್ನು ಅಲ್ಲೇ ಮಾಡುತ್ತೇನೆ. ಎಚ್ಚರ ವಾಗುವಾಗ ಬಹಳ ಕೆಟ್ಟ ಕನಸು ಬಿದ್ದಿತು ನೋಡು, ನೀನು ಒಳಗೆ ಹೋಗಿ ಮಲಕೋ'' ಎಂದವರೇ ಬೆತ್ತವನ್ನೂರುತ್ತ ಮೆಟ್ಟಲಿಳಿದು ನಡದೇಬಿಟ್ಟರು. ಅಜ್ಜನ ಈ ವಿಚಿತ್ರ ರೀತಿಯನ್ನು ಕಂಡು ದಿಗಿಲುಗೊಂಡ ಫಾತಿಮಾ, ಒಳಗೆ ಹೋಗಿ ಗಂಡನನ್ನು ಎಬ್ಬಿಸಿದಳು. 'ನೀನು ಹೆದರಬೇಡ. ಕಾಸೀಮನ ಬಗ್ಗೆ ಏನೋ ಕೆಟ್ಟ ಕನಸು ಬಿದ್ದಿರಬೇಕು. ನಾನೂ ಕಾಸೀಮನ ಮನೆಯ ತನಕ ಹೋಗಿಬರುತ್ತೇನೆ. ಎಂದು ಹೆಂಡತಿಗೆ ಸಮಾಧಾನ ಹೇಳಿ, ಮೋರೆ ತೊಳೆದು, ಉಡುಪು ಮಾಡಿ ಮನೆಯ ಹೊರಗೆ ಬಿದ್ದ ಉಸ್ಮಾನ ರಸ್ತೆಗೆ ಬರುವಷ್ಟರಲ್ಲಿ ಬುಡಸಾಗರು ಗಣಪಯ್ಯರ ಅಂಗಡಿಯ ಇದುರಿನ ಓಣಿಯಲ್ಲಿ ತಿರುಗಿಯಾಗಿತ್ತು. 'ಅಬ್ಬಾ! ಇಷ್ಟು ಅವಸರದಿಂದ ನಡೆಯಬೇಕಾದ ಅದೆಂತಹ ಕನಸು ಬಿದ್ದಿರಬೇಕೋ, ಎಂದುಕೊಂಡು ಉಸ್ಮಾನ ತನ್ನ ನಡಿಗೆಯ ವೇಗ ಹೆಚ್ಚಿಸಿದ.

ರಸ್ತೆ ಹಾಗೂ ಓಣಿಗಳ ಕೂಟದಲ್ಲಿ ನಿಂತ ಆ ರಾಕ್ಷಸಾಕಾರದ ಗಾಳಿಮರ ನಡುವೆಯೇ ಮುರಿದು ಗದ್ದೆಯಲ್ಲಿ ಕುಸಿದುದನ್ನು: ಕೈತಾನನ ಹಿತ್ತಲಲ್ಲಿ ಮುಗಿಲೆತ್ತರಕ್ಕೆ ಬೆಳೆದ ತೆಂಗಿನ ಮರವೊಂದು ಚಂಡೇ ಕಳಚಿ ಬಿದ್ದು ಬೋಳಾಗಿ ನಿಂತುದನ್ನು: ಗದ್ದೆಯ ಬದಿಯ ಬೇಲಿಯೊಳಗಿನ ಹೂವು, ಎಲೆ, ಜಿಗ್ಗುಗಳು ಓಣಿಯಲ್ಲಿ ಚೆಲ್ಲಾಪಿಲ್ಲಿಯಾಗಿ ಹರಡಿ ಬಿದ್ದುದನ್ನು ನೋಡಿ, ಬುಡಣಸಾಬರು, ಕೈತಾನನ ಗಾಣ ದಾಟಿ ನರಸಿಂಹನ ದಣಪೆಯನ್ನು ಸಮೀಪಿಸುತ್ತಿದ್ದಾಗ ದಣಪೆಯ ಒಳಗಡೆ, ಹಿತ್ತಲಲ್ಲಿ ನೆರೆದ ಜನರ ಗುಂಪನ್ನು ನೋಡಿ, ಕಣ್ಣುಗಳನ್ನು ಅಬ್ಬಾ ಎಂದು ಇಷ್ಟಗಲ ಅರಳಿಸಿ, ''ಇಷ್ಟೆಲ್ಲ ಜನ ಆಟಕ್ಕೆ ಬಂದಿದ್ದರೆ? ಆಟ ಈಗ ಮುಗಿದಿತೆ?'' ಎಂದು ಚಕಿತರಾಗಿ ಮುಂದೆ ನಡೆದಾಗ, ದಣಪೆಯೊಳಗಿನಿಂದ ಮಡಕೆಯಲ್ಲಿ ಬೆಂಕಿ ಹೊತ್ತು ಹೊರಗೆ ಬಂದವನ ಹಿಂದೆಯೇ ನಿನ್ನೆ ರಾತ್ರಿ ಓಣಿಯಲ್ಲಿ ಭೆಟ್ಟಿಯಾದ ನಾಲ್ವರು ಗೆಳೆಯರೂ ಹೊರಗೆ ಬಂದರು: ಅವರ ಹೆಗಲ ಮೇಲೆ ಬಿಳಿಯ ಹೊದಿಕೆ ಮುಚ್ಚಿದ, ಬಿದಿರ ಸಿದಿಗೆಯೇರಿದ ದೇಹ! ಶ್ರೀರಾಮ್ ಜೈರಾಮ್ ಕೆಳದನಿಯಲ್ಲೇ ಭಜನೆ ಮಾಡುತ್ತ ಹೊರಗೆ ಬಂದ ಗುಂಪು ಆ ನಾಲ್ವರ ಹಿಂದೆಯೇ ಹೊರಟಿತು. 'ಯಾ ಖುದಾ ಎಂದು ತಬ್ಬಿಬ್ಬಾಗಿ ನೋಡುತ್ತ, ಕಾಲು ಸೋತು ಬಂದಂತಾಗಿ ನಡೆಯಲಾಗದೇ, ನಿಂತಲ್ಲೇ ನಿಂತುಬಿಟ್ಟ ಮುದುಕ ಬುಡುಣಸಾಬರ ಕಡೆಗೊಮ್ಮೆ ದು:ಖ ತುಂಬಿದ ದೃಷ್ಟಿ ಬೀರಿ, ಗುಂಪು ಮುಂದೆ ನಡೆಯಿತು. ಅವರೆಲ್ಲರೂ ಕೈತಾನನ ಗಾಣ ದಾಟಿ, ಮುಂದೆ ಹೋಗಿ ಓಣಿಯ ತುದಿ ಸೇರಿ ರಸ್ತೆಗೆ ಹೊರಳುವ ತನಕವೂ ಹಿಂತಿರುಗಿ ನೋಡುತ್ತ ನಿಂತಾಗ ನರಸಿಂಹನ ಮನೆಯೊಳಗಿಂದ ಕೇಳಿಸಿದ ಆಕ್ರಂದನದಿಂದ ಕರಳು ಕಿವುಚಿದಂತಾಗಿ, 'ಇದು ಆಗಬಾರದಿತ್ತು, ಎಂದರು. ಮರುಗಳಿಗೆ ಅನುಭವದ ಆಳ ಬಾಯಿಬಿಟ್ಟಾಗ 'ಎಲ್ಲ ಖುದಾನ ಮರ್ಜಿ' ಎಂದರು. ಸೋತ ವೃದ್ಧ ಕಾಲುಗಳನ್ನೆಳೆಯುತ್ತ ಮುಂದೆ ಸಾಗಿ ಪರಮೇಶ್ವರಿಯ ಹಿತ್ತಲ ದಣಪೆ ದಾಟುತ್ತಿದ್ದಾಗ, ಓಡೋಡಿ ಬಂದು ಮುಟ್ಟಿದ ಉಸ್ಮಾನ್ ತನಗೆ ಹತ್ತಿದ ಉಬ್ಬಸವನ್ನೂ ಲೆಕ್ಕಿಸದೆ, 'ಕೇಳಿದೆಯೋ ಅಬಾಜಾನ್, ನರಸಿಂಹ ಸತ್ತವನಂತೆ!' ಎಂದ. ಬುಡಣಸಾಬರು ಬರಿಯೆ 'ಹೂಂ' ಎಂದರು. ಅಜ್ಜನ ಹೂಂಕಾರದ ಅರ್ಥವನ್ನು ತಿಳಿದುಕೊಳ್ಳುವ ಮೊದಲೇ ತನಗೆ ತಿಳಿದದ್ದನ್ನು ಒಳಗೆ ಇಟ್ಟುಕೊಳ್ಳುವುದ ಸಾಧ್ಯವಾಗಿ ಉಸ್ಮಾನ ಹೇಳಿದ: 'ರಾತ್ರಿ ಗೆಳೆಯರೊಂದಿಗೆ ಇಸ್ಪೀಟು ಆಡುತ್ತಿದ್ದಾಗ, ಆಟ ಒಳ್ಳೆ ರಂಗಕ್ಕೆ ಬಂದಾಗ ಇವನು ಒಮ್ಮೆಲೇ ಹೆದರಿ, 'ಅಜ್ಜೀ, ಹಾವೂ ,' ಎಂದು ಒದರಿದನಂತೆ. ಅಜ್ಜಿ, ಗೆಳೆಯರೆಲ್ಲ ಹೌಹಾರಿ ಎಲ್ಲಿ ಎಲ್ಲಿ ಎಂದು ಹುಡುಕುತ್ತ ಕೇಳಿದಾಗ ಸುಣ್ಣ ಹಚ್ಚಿಕೊಂಡ ಬೆರಳನ್ನು ಕಂದೀಲಿನ ಬೆಳಕಿಗೆ ಹಿಡಿದು, ನಡುಗುತ್ತ ''ನನಗಾಗ ಕೊಟ್ಟಿಗೆಯಲ್ಲಿ ಕಚ್ಚಿದ್ದು ಇಲಿಯಲ್ಲವೇನೋ ಅಜ್ಜೀ, ಬೆರಳು ನೋಡೆ!'' ಎಂದನಂತೆ. ಸಂಜೆ, ಕೊಟ್ಟಿಗೆಯಲ್ಲಿ ಅಟ್ಟದ ಮೇಲಿನಿಂದ ಹುಲ್ಲುಕಟ್ಟುಗಳನ್ನು ಇಳಿಸುವಾಗ, ಕಚ್ಚಿದ್ದು ಇಲಿಯೆಂದು ತಿಳಿದು ಗಾಯಕ್ಕೆ ಸುಣ್ಣ ಹಚ್ಚಿಕೊಂಡ ಬೆರಳು ಕಪ್ಪುಗಟ್ಟಿತಂತೆ. ತಲೆ ಸುತ್ತಿದಂತಾಗುತ್ತದೆಯೆಂದು ಮಲಗಿದನಂತೆ. ಮಧ್ಯರಾತ್ರಿಯ ಹೊತ್ತಿಗೆ ............. ಅಲ್ಲ ಅಬಾಜಾನ್, ಎಂತಹ ಹೊತ್ತಿಗೆ ಸಾವು ನೋಡು! ಅಗದೀ ಉಗೇದಿನಿಂದ ಗೆಳೆಯರನ್ನೆಲ್ಲ ಆಟಕ್ಕೆ ಕರೆದಾಗ ........''

ಬುಡಣಸಾಬರು ಮಾತನಾಡಲಿಲ್ಲ.

ನಿನ್ನೆ ಸಂಜೆಯಿಂದಲೂ ಅನುಭವಿಸಿದ್ದು : ತಾವು ಸುತ್ತಿದ ಆ ಬಳಸು ದಾರಿಯಲ್ಲಿ ತಮ್ಮ ಗಮನ ಸೆಳೆದದ್ದು ; ನೆನಪು ಕೆರಳಿಸಿದ್ದು ; ಕಂಡಂತೆ ಕಾಣಿಸಿಕೊಂಡಂತೆ ಭಾಸವಾದದ್ದು, ಮಳೆ ಬಿದ್ದದ್ದು — ಎಲ್ಲ ಎಲ್ಲವೂ ಮರುಕಳಿಸಿದಂತಾಗಿ, ಮುಂಜಾವದ ಕನಸೂ ಇನ್ನೊಮ್ಮೆ ನೆನಪಾಗಿ, ನಿನ್ನೆಯ ಸಂಜೆಯೇ ಹಾವಿನ ರೂಪ ಧರಿಸುತ್ತ ಅವನ ಸಾವಿಗಾಗಿ ಸಿದ್ಧವಾಗುತ್ತಿತ್ತು. ಹೊಂಚು ಹಾಕುತ್ತಿತ್ತು ಎಂದು ಅನ್ನಿಸಿದಾಗ ಜೀವ ಝುಮ್ ಎಂದಿತು.

ಉಸ್ಮಾನ ಏನೋ ಮಾತನಾಡಿರಬೇಕು. ಬುಡಣಸಾಬರಿಗೆ ಅದು ಕೇಳಿಸಲಿಲ್ಲ. ಅವರು ತಮ್ಮದೇ ಗುಂಗಿನಲ್ಲಿದ್ದರು ; ಗೆಳೆಯರನ್ನು ಆಟಕ್ಕೆ ಕರೆದಾಗ ಸತ್ತದ್ದಲ್ಲ. ಕಚ್ಚಿದ್ದು ಇಲಿಯೆಂದು ಅಜ್ಜಿ — ಅಮ್ಮಗೆ ಬಾಯಿಂದ ಹೇಳುವಾಗಲೂ ಸಾವಿನ ಮುಂಗಾಳಿ ಹತ್ತಿದ ಜೀವ ಆಳದಲ್ಲೆಲ್ಲೋ ಹೆದರಿಯೇ ಗೆಳೆಯರನ್ನು ಆಟಕ್ಕೆ ಕರೆಸಿರಬೇಕು : ಹಾಗೆಂದು ಉಸ್ಮಾನನಿಗೆ ಮಾತ್ರ ಬಾಯಲ್ಲಿ ಆಡಿ ತೋರಿಸಲಿಲ್ಲ.

ಇಬ್ಬರೂ ಈಗ ಓಣಿಯ ಬಾಯಿಗೆ ಬಂದಿದ್ದರು. ಇದಿರುಗಡೆ, ನಿನ್ನೆ ಮಧ್ಯಾಹ್ನದಿಂದಲೂ ಮುಚ್ಚಿಯೇ ಇದ್ದ, ಈಗ ದಿಕ್ಕಿಲ್ಲದಂತೆ ನಿಂತಿದ್ದ ಆ ಚಿರಪರಿಚಿತವಾದ ಅಂಗಡಿಯ ಕೆಳಜಗಲಿಯ ಮೇಲೊಬ್ಬ ಕಂಬಳಿ ಹಾಸಿ ಹಗ್ಗದ ಸುರಳಿಯನ್ನೇ ತಲೆದಿಂಬಾಗಿಸಿ ರಸ್ತೆಯ ಕಡೆಗೆ ಬೆನ್ನು ಮಾಡಿ ಮಲಗಿದ್ದುದನ್ನು ನೋಡುತ್ತ, ಪೂರ್ವದ ಆಕಾಶ ಎಂದಿನಂತೆಯೇ ಕೆಂಪೇರ ಹತ್ತಿದಾಗ, ನಿನ್ನೆ ರಾತ್ರಿ ಅಂತಹದೇನೂ ನಡೆಯಲೇ ಇಲ್ಲ ಎನ್ನುವ ಮೋಡಿಯಲ್ಲಿ ಹೊಸ ದಿನವೊಂದು ಸದ್ದಿಲ್ಲದೇ ಹುಟ್ಟುತ್ತಿದ್ದಾಗ, ರಸ್ತೆಗೆ ಹೊರಳಿ, ಮುಂದೆ ನಡೆದಿದ್ದರು. ಮಾತು ನಿಲ್ಲಿಸಿದ್ದರು.

— ಯಶವಂತ ಚಿತ್ತಾಲ

## 13.2.1 ಪಠ್ಯ — 1 ರ ವಿಶ್ಲೇಷಣೆ

1. ಈ ಕತೆಯ ಶೀರ್ಷಿಕೆ **'ಆಟ'** ಎಂದಿರುವುದರಿಂದ ಇದು ಯಾವ ರೀತಿಯ 'ಆಟ' ಎಂಬುದು ಕತೆ ಓದುವ ನಮಗೆ ಪ್ರಶ್ನೆಯಾಗಿ ಕಾಣುತ್ತದೆ. 'ಆಟ' ಕಥೆಯಲ್ಲಿ ಯಾವ ತಿರುವುಗಳನ್ನು ಕಂಡುಕೊಳ್ಳುತ್ತದೆ. ನೋಡೋಣ ಎನ್ನುವ ಕುತೂಹಲ ಉಂಟಾಗುತ್ತದೆ.

2. ಕಥೆ ಪ್ರಾರಂಭ ಬುಡಣಸಾಬರು ಮೊಮ್ಮಗನ ಹೆಂಡತಿ ಚಾಂದಬೀಬಿಗೆ ಫಾತಿಮಾಳ ಮನೆಗೆ ಹೋಗುತ್ತೇನೆಂದು ಹೇಳಿ ಹೊರಡುವುದರಿಂದಾಗುತ್ತದೆ. ಆಗ ದೀಪ ಹಚ್ಚುವ ಹೊತ್ತು. ಬುಡಣಸಾಬರು ಕಾಣುವ ಕವಿದ 'ಕತ್ತಲೆ', ಹುಣಿಸೆ ಮರಗಳ ತೋಪು' 'ಗುಡುಗು' ಓದುಗರ ಮನಸ್ಸಿನಲ್ಲಿ ಭಯ ಮೂಡಿಸುವ ವಾತಾವರಣವನ್ನು ಸೃಷ್ಟಿಸುತ್ತದೆ. ಇಷ್ಟೇ ಅಲ್ಲದೆ 'ಅಡ್ಡತಿಂಗಳಿನಲ್ಲಿ ಮಳೆ ಬರುವಂತಿರುವುದ'ರ ಕಾರಣ ಏನಿರಬಹುದೆಂದು ಮುಂದೆ ಹುಡುಕುವಂತೆ ಮಾಡುತ್ತದೆ.

3. ಎರಡನೆ ಪ್ಯಾರ : ಬುಡಣಸಾಬರು ವಯಸ್ಸಾದವರೆಂದೂ, ಪುರಾಣಕಾಲದ ಋಷಿಗಳಂತೆ, ಮಂತ್ರವಾದಿಯಂತೆ, ಪವಾಡಪುರುಷರಂತೆ ಕಾಣುವ ವ್ಯಕ್ತಿ ಎಂದೂ ತಿಳಿದು ಬರುತ್ತದೆ. ಪ್ರತಿ ರಾತ್ರಿಯೂ ಮೊಮ್ಮಗನ ಮನೆಯಿಂದ ಮೊಮ್ಮಗಳು ಫಾತಿಮಾಳ ಮನೆಗೆ ಹೋಗುತ್ತಾರೆ.

4. ಈ ಮುದುಕನ ಪ್ರತಿದಿನದ ಪಯಣ ಅಲ್ಲಿಯವರಿಗೆಲ್ಲ ಗೊತ್ತಿದ್ದ ದೊಡ್ಡ ಅಂಗಡಿಯ ಮಹಾದೇವಶೆಟ್ಟಿ 'ಮಳೆ ಬರುತ್ತದೆ ಹೋಗಬೇಡಿ' ಎಂಬ ಸೂಚನೆಯನ್ನು ಕೊಟ್ಟರೂ ಬರಿದೆ ನಗೆಯ ಮಿಂಚನ್ನು ಹಾರಿಸಿ ಮುಂದೆ ನಡೆಯುತ್ತಾರೆ

   ಬುಡಣಸಾಬರ ಮಿಂಚಿನ ನಗೆಗೂ 'ಭುಗ್ ಎಂದು ಶುಭ್ರವಾಗಿ ಗ್ಯಾಸ್ ದೇಹ ಹತ್ತಿಕೊಂಡದ್ದು, ಒಂದಕ್ಕೊಂದು ಹೊಂದಿಕೊಳ್ಳುವ ರೀತಿಯನ್ನೂ ಗಮನಿಸಬಹುದು.

   ಒರಣಿಯ **ಹುತ್ತ** ಬೆಳೆಸಿಕೊಂಡ ಆ ಹಟ್ಟಿ ಮನೆಯ ಮುದುಕ ಸದಾಶಿವರಾಯ ದಣಪೆಯ ಕಲ್ಲಿನ ಮೇಲೆ ಕುಳಿತಿಲ್ಲ. ಹೆದರಿದ್ದಾನೆ ಎಂದು ತಿಳಿಯುತ್ತದೆ. (ಆದರೆ ಅವನಿಗಿಂತ ಮುದುಕರಾದ ಬುಡಣಸಾಬರು ಹೆದರಿಲ್ಲದಿರುವುದನ್ನು ಸೂಚಿಸುತ್ತದೆ). ನಂತರ '**ನಾಗಸಂಪಿಗೆ ಮರ,** ಮತ್ತೆ ಭಯದ ವಾತಾವರಣ ಸೃಷ್ಟಿಸುತ್ತದೆ.

   ಯಾವತ್ತೂ ಇಷ್ಟು ಹೊತ್ತಿಗೆ (ಅಕಾಲಕ್ಕೆ) ಮುಚ್ಚದ ಅಂಗಡಿ ಇಂದು ಇಸ್ಪೀಟಿನ ತಲಬೆಗೆ ಮುಚ್ಚಿರುವುದು. ಅಕಾಲದ ಮಳೆಯಂತೆಯೇ ಕಾಣುತ್ತದೆ.

   ಎಚ್ಚರಿಕೆಯಿಂದ ಮುಂದೆ ಹೋಗುತ್ತಿದ್ದಂತೆ ಮಾತನಾಡಿಕೊಂಡು ಬರುತ್ತಿದ್ದ ಮಾಧವ ಕೇಶವ ಪೈರ ಮಗ. "ಈ ತಿಂಗಳಲ್ಲಿ ಇಂಥ ಮಳೆ ಬಂದದ್ದು ನಿಮಗಾದರೂ ನೆನಪಿದೆಯೆ" ಎಂದು ಮೊದಲ ಪ್ಯಾರದ 'ಅಡ್ಡಮಳೆ' ಆ ಊರಿನ ಚರಿತ್ರೆಯಲ್ಲೇ ಇಲ್ಲ ಎನ್ನುವುದನ್ನೂ ಒತ್ತಿ ಹೇಳುತ್ತಾನೆ. ಅವನು ಹೊರಟದ್ದು ನರಸಿಂಹನ ಮನೆಯಲ್ಲಿ **ಆಟ** (ಅಂದರೆ ಇಸ್ಪೀಟು ಆಟ) ಕ್ಕೆ. ಆದರೆ ಕತ್ತಲೆಯಲ್ಲಿ ಅವನು ತುಳಿದಿದ್ದು ಗಾಡಿಯ 'ಹಗ್ಗ' (ಹಾವಿನ ನೆನಪಾಗುತ್ತದೆ).

5. ಬುಡಣಸಾಬರು ಮುಂದೆ ಹೊರಟಂತೆಲ್ಲ 'ಕಪ್ಪಿನ ಗುಪ್ಪೆಯಂತೆ ನಿಂತ ಮನೆ', ನಾಯಿಯ ಬೊಗಳುವಿಕೆ, ಕರೀಮ ಸಾಬ ಕಲಾಯಿ ಹಾಕಲು ತಿದಿಯನ್ನು '**ಕಣಕಿದಾಗ "ಭುಸ್"** ಎಂದು ಹೊರ ಬಂದು ಕೆಂಪು ನಾಲಗೆ

ಚಾಚಿದಾಗ ಹತ್ತಿರದ ಗಿಡಮರಗಳೆಲ್ಲ ಕೆಂಪಾಗಿ, ವಿಷವೇರಿದಂತೆ ಕಪ್ಪಾಗುವುದು' ಓದುಗರಲ್ಲಿ ಭಯವನ್ನುಂಟು ಮಾಡುವುದಲ್ಲದೆ ಹಾವು ಕಡಿದರೆ ಆಗುವ ವರ್ಣವೆ ಕಳವಳವನ್ನು ಉಂಟು ಮಾಡುತ್ತದೆ.

6. ಸಾಂತಯ್ಯನ ಸರ್ವೋತ್ತಮ ಹುಡುಗಾಟದ ಹುಡುಗ ಆಟಕ್ಕೆ ಹೋಗುತ್ತಿರುವುದು ಗೊತ್ತಾಗುತ್ತದೆ. ಮುಂದೆ ಬರುವ ವಿಠ್ಠಲನನ್ನು ಬುಡಸಾಬರೇ 'ಆಟ'ಕ್ಕೋ ಎಂದು ಕೇಳುತ್ತಾರೆ.

   ಮುಂದೆ ನಡೆದ ಬುಡಣಸಾಬರು 'ಧೋ' ಎಂದು ಸುರಿದ ಮಳೆಯಿಂದ ತಪ್ಪಿಸಿಕೊಳ್ಳಲು ಗಣಪಯ್ಯನ ಅಂಗಡಿಯಲ್ಲಿ ಕುಳಿತು '**ಅಡ್ಡ ತಿಂಗಳಲ್ಲಿ ಎಂಥ ಮಳೆ**' ವಿಷಯವನ್ನು ಹೇಳುತ್ತಾರೆ.

## 13.2.2 ಪಠ್ಯ — 1 ನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗುವ ಅಂಶಗಳು

1. ಕಥೆಯ ಈ ಭಾಗದಲ್ಲಿ ಬುಡಣಸಾಬರು ಕಂಡ ಹುಡುಗರು ನರಸಿಂಹನ ಅಂಗಳ ತಲುಪುವ ಚಿತ್ರ ಬರುತ್ತದೆ. ನಾಗೇಶ 'ಮುದುಕೀ ತಿನ್ ..........'' ಎಂದು ಹೇಳುತ್ತಾ ಸಾವಿನ ಬಗ್ಗೆ ಬಂದುದರಿಂದ ಹೆದರುತ್ತಾನೆ. ಅಲ್ಲದೆ ಅದಕ್ಕೆ ಕಾರಣ ನರಸಿಂಹನ '**ಮನೆಯ ದಣಪೆಯ ಹತ್ತಿರದ ಮಾವಿನ ಮರ ಕೆಳಗೊಬ್ಬ ಕರಗ್ರಿನ ಕಂಬಳಿಕೊಪ್ಪೆ ಹಾಕಿದ್ದ**' ಮನುಷ್ಯನನ್ನು ನೋಡಿದ್ದನ್ನು ಹೇಳುತ್ತಾನೆ.

2. ನಂತರ ಬಂದ ಮಾಧವ ''ಗೊಬ್ಬರದ ಕುಳಿಯ ಹತ್ತಿರ **ಕಪ್ಪಗಿನ ಮನುಷ್ಯ ತಲೆಯ ಮೇಲೆ ಕಂಬಳಿ ಕೊಪ್ಪೆ ಹಾಕಿ ಹೀಗೆ ಕೈಕಟ್ಟಿ** ನಿಂತಿದ್ದನ್ನು ಹೆದರಿ ಹೇಳುತ್ತಾನೆ.

3. ಸರ್ವೋತ್ತಮನೂ ''**ನಾನೂ ನೋಡಿದೆ. ಕಪ್ಪಗಿದ್ದಾನಲ್ಲ? ಕಂಬಳಿಕೊಪ್ಪೆ ಹಾಕಿ ಕೊಂಡಿದ್ದಾನಲ್ಲ? ಇಷ್ಟುದ್ದ ಮೀಸೆ ಬಿಟ್ಟಿದ್ದಾನಲ್ಲ?**'' ಎಂದು ನಡುಗುತ್ತಾನೆ.

4. ನಂತರ ಬಂದ ವಿಠ್ಠಲ ಥರ ಥರ ನಡುಗುತ್ತಾ ಹೇಳುವುದು. ''**ನಿಮ್ಮ ಕೊಟ್ಟಿಗೆಯ ಬಾಗಿಲಲ್ಲೇ ಒಬ್ಬ ಕರಗ್ರಿನ ಮನುಷ್ಯ ಕಂಬಳೀ ಕೊಪ್ಪೆ ಹಾಕಿ, ಕೈಯಲ್ಲಿ ಸುರಳಿ ಸುತ್ತಿದ** ಹಗ್ಗ ಹಿಡಿದು ನಿಂತದ್ದು **ನೋಡಿ**''

5. ನರಸಿಂಹ ನೋಡಿದ್ದು ಮಾವಿನ ಮರದ ಕೆಳಗೆ ಇದ್ದ ಕರಗ್ರಿನ ಕಂಬಳಿ ಹಾಕಿದ ವ್ಯಕ್ತಿ, ಮಾಧವ ಕಂಡದ್ದು ನರಸಿಂಹನ ಮನೆಯ ಗೊಬ್ಬರದ ಕುಳಿಯ ಹತ್ತಿರ. ಅಂದರೆ ನರಸಿಂಹನ ಮನೆಗೆ ಸ್ವಲ್ಪ ಹತ್ತಿರವಾಗಿರುತ್ತಾನೆ. ಅಷ್ಟೇ ಅಲ್ಲ ಕರಗ್ರಿನ ಆ ವ್ಯಕ್ತಿಯ ವಿವರಣೆ ಸ್ವಲ್ಪ ಜಾಸ್ತಿಯಾಗಿದೆ. ಸರ್ವೋತ್ತಮ ಹಿತ್ತಲಲ್ಲಿ ನೋಡುತ್ತಾನೆ. ವಿವರಣೆ ಇನ್ನೂ ಜಾಸ್ತಿ. ವಿಠ್ಠಲನು ನೋಡಿದಾಗ ಅವನು ಕೊಟ್ಟಿಗೆಯ ಬಾಗಿಲಿಗೇ, ಇನ್ನೂ ಹತ್ತಿರ ಬಂದಿದ್ದಾನೆ. ಹಗ್ಗವನ್ನೂ ಹಿಡಿದು ನಿಂತಿದ್ದಾನೆ''.

6. ನರಸಿಂಹನ ತಾಯಿಗೆ ಅವನು 'ಕಳ್ಳಗಿಳ್ಳ ಇರಲಿಕ್ಕಿಇಲ್ಲವಲ್ಲ?' ಎಂಬ ಗಾಬರಿ ಆಗುತ್ತದೆ. (ಇದರಿಂದ ಒದಗಬಹುದಾದ 'ಮೃತ್ಯು' ಕಳ್ಳ ಬೆಕ್ಕಿನಂತೆ ಎರಗುವುದನ್ನು ಸೂಚಿಸಬಹುದು)

7. ಮುಂದಿನ ಪ್ಯಾರಾದಲ್ಲಿ ನರಸಿಂಹನಿಗೆ ಹಾಗೆ ಬಂದ ವ್ಯಕ್ತಿ ಯಾರು ಎಂಬುದು ಖಚಿತವಾಗಿ ಗೊತ್ತಿರುತ್ತದೆ. ಅವನನ್ನು ಅಂಗಡಿಯಲ್ಲಿ ನೋಡಿ ಮಾತಾಡಿಸಿಕೊಂಡು ಬಂದಿರುತ್ತಾನೆ. ''**ಆಗ ದಾರಿ ತಪ್ಪಿ ಹೋದವನು ಈಗ** ಇಲ್ಲಿ ಬಂದು **ಮುಟ್ಟಿದ್ದಾನು**'' ಎಂಬ.

8. ''ವಯಸ್ಸಾದ ಅಜ್ಜಿ ಮಾತ್ರ ಸುಮ್ಮನಿರುತ್ತಾಳೆ''. ನರಸಿಂಹನ ತಾಯಿಗೆ '**ಕೊಟ್ಟಿಗೆಯ ಹತ್ತಿರ ಬಂದವನು ಇಲ್ಲಿಯೂ ಬರಲಾರನಷ್ಟೆ**' ಎಂಬ ಆತಂಕ.

9. ಮುಂದಿನ ಪ್ಯಾರಾದಲ್ಲಿ ಧೈರ್ಯದಿಂದ್ದಿದ್ದಂತೆ ಕಂಡ ಅಜ್ಜಿಗೆ ಮತ್ತೊಮ್ಮೆ ಮಿಂಚಿದಾಗ ಆ ವ್ಯಕ್ತಿ '**ಅಂಗಳದಲ್ಲಿ ತುಳಸಿ ವೃಂದಾವನದ ಹತ್ತಿರವೇ ಥಕ್ಕನೆ ಕಂಡಂತಾಗಿ** ಆ ಮುದುಕಿ ಒಳಗೆ ಬರುತ್ತಾಳೆ.

10. ಈ ಭಾಗದಲ್ಲಿ ಕೆಟ್ಟ ಕನಸು ಬಿದ್ದ ಬುಡಣಸಾಬರು ದಡಬಡನೆ ಬೆಳಿಗ್ಗೆ ಅಷ್ಟು ಹೊತ್ತಿಗೇ ಎದ್ದು, ಪ್ರಾರ್ಥನೆಯನ್ನು ಮಾಡದೆ ಮೊಮ್ಮಗನ ಮನೆಯ ಕಡೆಗೆ ಹೆಜ್ಜೆ ಹಾಕುತ್ತಾರೆ.

11. ಬರುವಾಗಿನ ರಸ್ತೆಯಲ್ಲಿ ಅವರು ಕಂಡದ್ದು '**ಗಾಳಿ ಮರ ಮುರಿದು ಗದ್ದೆಯಲ್ಲಿ ಕುಸಿದದ್ದು, ಕೈತಾನನ ಹಿತ್ತಲಲ್ಲಿ ಮುಗಿಲೆತ್ತರಕ್ಕೆ ಬೆಳೆದಿದ್ದ ತೆಂಗಿನ ಮರವೊಂದು ಚಂಡೇ ಕಳಚಿ ಬೋಳಾಗಿ** ನಿಂತದ್ದು, **ಹೂವು, ಎಲೆ, ಜಗ್ಗುಗಳು ಓಣಿಯಲ್ಲಿ ಚೆಲ್ಲಾಪಿಲ್ಲಿಯಾಗಿ ಹರಡಿ** ಬಿದ್ದಿರುವುದು.

12. ನರಸಿಂಹನ ದಣಪೆಯ ಹತ್ತಿರ ಬಂದಾಗ 'ಇಷ್ಟೆಲ್ಲ ಜನ **ಆಟಕ್ಕೆ** ಬಂದಿದ್ದರೆ? ಆಟ ಈಗ ಮುಗಿದಿತೆ? ಎಂದುಕೊಳ್ಳುತ್ತಿದ್ದಾಗ ಮುಂದೆ ಬರುವ ವಿವರಗಳಲ್ಲಿ ನರಸಿಂಹ ಸತ್ತಿರುದ್ದನ್ನು ಬುಡಣಸಾಬರು ಕಂಡು ಕೊಳ್ಳುತ್ತಾರೆ. 'ಇದು ಆಗಬಾರದಿತ್ತು' ''ಎಲ್ಲಾ ಖುದಾನ ಮರ್ಜಿ'' ಅಂದುಕೊಳ್ಳುತ್ತಾರೆ.

13. ನಂತರ ಉಸ್ಮಾನ ಹೇಳಿದ ವಿವರಗಳಿಂದ ನರಸಿಂಹ ಸತ್ತದ್ದು **ಹಾವಿನ ಕಡಿತದಿಂದ** ಎಂದು ತಿಳಿಯುತ್ತದೆ. ನಿನ್ನೆ ಸಂಜೆಯಿಂದ ಅನುಭವಿಸಿದ್ದೆಲ್ಲವೂ, ಮುಂಜಾವದ ಕನಸೂ ನಿನ್ನೆಯ ಸಂಜೆಯೇ ಹಾವಿನ ರೂಪಧರಿಸುತ್ತ

ನರಸಿಂಹನ ಸಾವಿನ ತಯಾರಿ ಆಗಿದ್ದು ಎಂದು ಬುಡಣಸಾಬರಿಗೆ ಅನಿಸಿದಾಗ ಓದುಗರಾದ ನಮಗೂ ಕತೆಯಲ್ಲಿ ಬೆಳೆಯುವ ಚಿತ್ರಣಗಳ, ಪ್ರತಿಮೆಗಳ ಅರಿವು ಆಗುತ್ತಾ ಹೋಗುತ್ತದೆ.

14. ಕತೆ ಕೊನೆಗೊಳ್ಳುವುದೂ, 'ಆ ಚಿರಪರಿಚಿತವಾದ ಅಂಗಡಿಯ ಕೆಳಜಗುಲಿಯ ಮೇಲೊಬ್ಬ ಕಂಬಳಿ ಹಾಸಿ ಹಗ್ಗದ ಸುರುಳಿಯನ್ನೇ ತಲೆದಿಂಬಾಗಿಸಿ ರಸ್ತೆಯ ಕಡೆಗೆ ಬೆನ್ನುಮಾಡಿ ಮಲಗಿದ್ದು'' 'ಅವನು ಬಂದ ಕೆಲಸವನ್ನು ಮುಗಿಸಿ ಹಾಯಾಗಿ ನಿದ್ರಿಸುತ್ತಿದ್ದಾನೆ ಎನ್ನಿಸುತ್ತದೆ.

## 13.2.3 ಪಠ್ಯ — 1 ರಲ್ಲಿ ಬರುವ ಪ್ರತಿಮೆ ಮತ್ತು ಸಂಕೇತಗಳು

ಕಥೆಯನ್ನು ಓದಿ ಮುಗಿಸಿದ ನಮಗೆ ಕಥೆ ಮೊದಲಿನಿಂದ ಬೆಳವಣಿಗೆಯಾಗುವ ರೀತಿ, ಅದು ಏನನ್ನು ಹೇಳಲು ಹೊರಟಿತ್ತು ಎಂಬುದನ್ನು ಮನಗಾಣಬಹುದು. ಮನಸ್ಸಿನಲ್ಲಿ ಎದ್ದ ಪ್ರಶ್ನೆಗಳಿಗೆ ಉತ್ತರಗಳು ಹೊಳೆಯುತ್ತಾ ಹೋಗುತ್ತವೆ.

**'ಅಕಾಲದ ಮಳೆ'** : ಈ ಚಿತ್ರಣವು ಕತೆಯಲ್ಲಿ ಬರುವ ಬುಡಣಸಾಬರು, ಮುದುಕ ಸದಾಶಿವರಾಯ, ನರಸಿಂಹನ ತಾಯಿ, ಅಜ್ಜಿ ಇವರಿಗೆ ಯಾರಿಗೂ ಸಾವು ಬರದೆ ಇನ್ನೂ ಹರೆಯದ ನರಸಿಂಹನಿಗೆ ಬರುವುದು ಅಕಾಲದ ಸಾವಾಗಿ ಅರ್ಥ ಪಡೆಯುತ್ತದೆ.

**ಹಾವಿನ ವರ್ಣನೆ** : 'ಸಣ್ಣ ಬೆಟ್ಟಗಳಂತಹ ಒರಲೆಯ ಹುತ್ತುಗಳನ್ನು ಬೆಳೆಯಿಸಿಕೊಂಡ ಮುದುಕ ಸದಾಶಿವರಾಯನ ಮನೆ', ನಾಗಸಂಪಿಗೆ ಮರ, ಕೇಶವ ಪೈಗಳ ಮಗ ಕತ್ತಲಲ್ಲಿ ತುಳಿದೆನೆಂದುಕೊಂಡ ಗಾಡಿಯ ಹಗ್ಗ, ಕರೀಮ ಸಾಬ ಕಲಾಯಿ ಹಾಕುವಾಗ ಬರುವ ಬೆಂಕಿ ಬುಸ್ ಎಂದು ಹೆಡೆ ಎತ್ತಿ ಕಚ್ಚಿ ವಿಷವೇರಿಸುವ ಹಾವಿನ ಪ್ರತಿಮೆ. ಈ ವಿವರಗಳೆ ನರಸಿಂಹನ ಹಾವು ಕಚ್ಚಿ ಸಾಯುವುದನ್ನು ಮುಂಚೆಯೇ ಸೂಚಿಸುತ್ತವೆ.

**ಕರಗ್ರಿನ ಕಂಬಳಿ ಕೊಪ್ಪೆ ಹಾಕಿದ್ದ ಮನುಷ್ಯ** : ಇವನ ಒಂದೊಂದೇ ವಿವರಣೆಗಳು ಯಮನನ್ನೇ ಹೋಲುವುದು. ಉಳಿದ ಯುವಕರಿಗೆ ಒಂದೊಂದೇ ಅಂಶವಾಗಿ ಗೋಚರಿಸುವ ಈ ಮನುಷ್ಯ ನರಸಿಂಹನಿಗೆ ಮಧ್ಯಾಹ್ನವೇ ಸ್ಪಷ್ಟವಾಗಿ ಪರಿಚಿತನಾಗಿರುತ್ತಾನೆ. ಅವನೇ ತನ್ನ ಮನೆಯ ದಾರಿಯನ್ನು ಹೇಳಿರುತ್ತಾನೆ.

**ಆಟ** :ಕಥೆಯುದ್ದಕ್ಕೂ ಬರುವ ಕತ್ತಲೆ-ಬೆಳಕಿನ ಆಟ, ಇಸ್ಪೀಟಾಟ, ಜೀವನದ ಆಟ 'ಸಾವು' ಆಡುವ ಆಟ, ಯಮ ಎಲ್ಲರನ್ನೂ ಮುಟ್ಟಿ ಮುಟ್ಟಿ ಆಟ ಕೊನೆಗೊಬ್ಬನನ್ನು ಕರೆದುಕೊಂಡು ಹೋಗುವ ಆಟ ಆಗುವುದು.

## 13.3 ಪಠ್ಯ - 2

### ಆಗಂತುಕ

ಬೆಳಿಗ್ಗೆ ನಿದ್ದೆಯಿಂದ ಎಚ್ಚರವಾಗುತ್ತಿದ್ದ ಹಾಗೆ ಕಿಟ್ಟಿಗೆ ಧುತ್ತನೆ ಇವತ್ತು ಯಾರೋ ಬತ್ತಾರೆ ಎನ್ನಿಸಿತು. ಕಣ್ಣುಜ್ಜುತ ಎದ್ದು ಕೂತವನೆ ಅವ್ವನಿಗೆ ಕರೆದು ಹೇಳಬೇಕೆನ್ನಿಸುವಷ್ಟರಲ್ಲಿ ಅದಾಗಲೆ ಅಜ್ಜಿ, ಅವ್ವ ಮಾಮೂಲು ಲಟಾಪಟಿ ಜಗಳಕ್ಕೆ ತೊಡಗಿದ್ದರು. ದಿನವೂ ಅಷ್ಟೆ. ಏಳುತ್ತಿದ್ದಂತೆ ಏನಾದರೊಂದು ಅಜ್ಜಿ ರಾಮಾಯಣ ಇದ್ದೇ ಇರುತ್ತಿತ್ತು. ಇವತ್ತೇಕೋ ಅವ್ವ ತುಂಬ ಗಡುಸಾಗಿ ಮಾತಾಡುವುದು ಕೇಳಿ ಭಯವಾಯಿತು. ಅಜ್ಜಿ, ಅವ್ವ ಜಗಳ ಶುರುವಾದಾಗಲೆಲ್ಲ ಅಪ್ಪ ಅವ್ವನಿಗೆ ಸಾಯಬೀಳ ದನಕ್ಕೆ ಬಡಿದ ಹಾಗೆ ಬಡಿಯುತ್ತಿದ್ದುದು ನೆನಪಾಗಿ ಅಪ್ಪನ ಬಗ್ಗೆ ಕೋಪ ಬಂತು. ಮುಖ ತೊಳೆದು ರೊಟ್ಟಿ ತಿನ್ನಲು ಹಜಾರದಲ್ಲಿ ಕೂತಾಗ ಅಂಗಳದ ಸೂರಿನಲ್ಲಿ ಕೂತಿದ್ದ ಕಾಗೆ ಒಂದೇ ಸಮನೆ ಅರಚುತ್ತಿತ್ತು. ಒಳಗಿನ್ನೂ ಅಜ್ಜಿಯ ವಟವಟ ನಿಂತಿರಲಿಲ್ಲ. ಮತ್ತೆ ಹಾಗೆ ಕಿರುಚುತ್ತಿರುವುದು ಕಂಡು ಇವತ್ತು ಯಾರೋ ಬತ್ತಾರೆ, ಬಂದೇ ಬತ್ತಾರೆ, ಕಾಗೆಯೂ ಕರೆಯುತ್ತಿದೆ ಎಂದು ಧುತ್ತನೆ ಮತ್ತೆ ಮತ್ತೆ ಅನ್ನಿಸಿದ್ದನ್ನು ಅವ್ವನಿಗೆ ಹೇಳಿದಾಗ — 'ಬತ್ತಾನೆ, ಬಂದ್ರೆ ಅವನೇ ಬರ್ಬೇಕು' ಎಂದು ಸಿಟ್ಟಿನಿಂದ ಮಾತನಾಡಿದ್ದು ಅರ್ಥವಾಗದೆ ಕಿಟ್ಟಿ 'ಯಾರವ್ವ ಅವನು' ಅಂದ ತುಂಬಾ ಕುತೂಹಲದಿಂದ. ಮತ್ತೆ ರೇಗಿ 'ಇನ್ಯಾರು ಒಂದೇ ಸಲ ಕರ್ಕೊಂಡು ಹೋಗವನು' ಅನ್ನುತ್ತ 'ತಿಂದೇಳೊ' ಎಂದು ತನ್ನ ಬಗ್ಗೆ ಸಿಟ್ಟಾದುದೇಕೆ? ಅವ್ವನೆ ಹೇಳಿತ್ತಲ್ಲವ ಕಾಗೆ ಕರೆದರೆ ಅವತ್ತು ಯಾರಾದರೂ ಬಂದೇ ಬತ್ತಾರೆ ಅಂತ? ಅದಕ್ಯಾಕೆ ಇಷ್ಟು ಕೋಪ?

ದಾರಿಯುದ್ದಕ್ಕೂ ತುಳಿದು ಬಂದಿದ್ದ ಕೆಸರು ಕಾಲುಗಳಲ್ಲಿ ಅಂಟಿಕೊಂಡಿದ್ದು ಇದೀಗ ಒಣಗಿ ಬಿರುಕು ಬಿರುಕಾಗಿ ಚಕ್ಕೆಯೇಳತೊಡಗಿತ್ತು. ಅನಂತಯ್ಯನವರ ಮಗ್ಗಿ ಪಾಠಕ್ಕಿಂತ ಕೆಸರು ಚಕ್ಕೆಗಳನ್ನು ಒಂದೊಂದೇ ಬಿಡಿಸುತ್ತ ಕೂರುವುದೇ ವಾಸಿ ಅನ್ನಿಸಿತು — ಕಿಟ್ಟಿಗೆ. ಕಿಟಕಿಯಾಚೆ ಬರನೆ ಕಾರು ಹೋದ ಸದ್ದು ಕೇಳಿಸಿ ಕೂತಲ್ಲಿ ಕತ್ತು ನಿಗರಿಸಿ ನೋಡಿದ. ಕಪ್ಪು ಬಣ್ಣದ ಕಾರು ಒಂದಿಷ್ಟು ಕಾಣಿಸಿ ಮಾದನ ಹೊಲದ ಉತಾರಿನಲ್ಲಿ ಇಳಿಯಿತು. ಇದ್ದಕ್ಕಿದ್ದ ಹಾಗೆ ಕಿಟ್ಟಿಗೆ 'ಯಾರೋ ಬತ್ತಾರೆ' ಅಂತ ಅನ್ನಿಸಿದ್ದು ನೆನಪಾಗಿ, ಈ ಕಾರಿನಲ್ಲಿ ಬಂದವರು ಅವರೇ ಇರಬೇಕು ಎನಿಸಿ; ಮುಂದೆ ಹೊಲಗೇರಿ ಚಡಾವು ಹತ್ತಿ ಬಸಿರಿ ಮರದ ತಿರುವಿನಲ್ಲಿ ತಮ್ಮೂರ ಕಡೆಯ ಓಣಿಗೆ ತಿರುಗುತ್ತದೇನೊ ನೋಡಬೇಕೆಂದುಕೊಂಡು ಎದ್ದು ನಿಂತೊಡನೆ ಅನಂತಯ್ಯ ಗದರಿಸುತ್ತ 'ಲೋ, ಯೋಕೊ ನಿಂತೆ' ಅಂತ ಕೇಳಿದಾಗ ಏನು ಹೇಳಬೇಕೆಂದು ತೋಚದೆ ತೆಪ್ಪಗೆ ಕೂತ.

ಮೊನ್ನೆ ಹಿಡಿದ ಹಾಳು ಜಡಿಮಳೆ ಧೋ ಎಂದು ಕಣ್ಣು ಮುಚ್ಚಿ ಸುರಿದು ಬೆಳಗಪ್ಪೆ ನಿಂತಿತ್ತು. ಆದರೂ ಪೂರ ಹೊಳುವಾಗಿರಲಿಲ್ಲ. ಈಗಲೋ ಇನ್ನೊಂದು ಗಳಿಗೇಲೋ ಹನಿಯೊಡೆಯಲು ಬಿಕ್ಕುತ್ತಿರುವಂತೆ ಕಟ್ಟಿಕೊಂಡಿದ್ದ ಮೋಡಗಳು ಕದಲಿರಲಿಲ್ಲ. ಮತ್ತೆ ಕ್ವಾಟೆ ಮುಗಿಲೆದ್ದು ದಪ್ಪ ದಪ್ಪ ಬಂಡೆಗಳಂಥ ಮೋಡಗಳು ಜಮಾಯಿಸುತ್ತ ಸಂಜೆಗೆ ಮುಂಚೆ ಮಬ್ಬುಕವುಚಿಗಂವನ್ನತೊಡಗಿತ್ತು. ಗುಡುಗುವ ಸದ್ದು ಕೇಳಿಸಿದ್ದೆ, ಸ್ಕೂಲು ಬಿಡುವ ಗಂಟೆಯನ್ನೂ ಬಾರಿಸುವ ಮುಂಚೆಯೇ ಪುಸ್ತಕದ ಚೀಲ ಬಗಲಿಗೇರಿಸಿ ನಿಂತು ಬಿಟ್ಟ ಕಿಟ್ಟಿಯನ್ನು ಕಂಡ ಅನಂತಯ್ಯ 'ಸರಿ, ನೀನು ಹೋಗೋ. ಏರಿ ಮೇಲೆ ಜ್ವಾಕೆ, ಜಾರ್ತದೆ. ಗುರುಬಸವನ ಅಂಗಡಿ ಅತ್ರ ನಿಮ್ಮೂರವ್ರು ಯಾರಾದ್ರೂ ಇದ್ರೆ ಅವರ ಜೊತೆ ಹೋಗೋ' ಎಂದು ಹೇಳುತ್ತಿದ್ದಂತೆಯೇ ಸ್ಕೂಲ ಜಗಲಿ ಧುಮುಕಿದ ಕಿಟ್ಟಿ ಬೀದಿಗಿಳಿದಿದ್ದ. ಕೆಸರು ತುಂಬಿದ ಬೀದಿಯಲ್ಲಿ ಹೆಜ್ಜೆ ಇಟ್ಟಾಗಲೆಲ್ಲ ಪಿಚಕ್ಕನೆ ಬೆರಳುಗಳ ನಡುವೆ ರಾಡಿ ಚಿಮ್ಮುವಾಗೆಲ್ಲ ಕಿಟ್ಟಿಗೆ ಏನೋ ಒಂದು ಥರ ಖುಷಿ. ಇನ್ನೂ ದನಕರುಗಳು ಕಾಡಿಂದ ಮೇದು ಮರಳದೆ ಬೀದಿ ಬಿಡುವಾಗಿತ್ತು. ಇಲ್ಲದಿದ್ದರೆ ಇಕ್ಕಟ್ಟಾದ ಬೀದಿಯಲ್ಲಿ ಅವುಗಳ ನಡುವೆ ತಾವು ಮಾಡಿಕೊಂಡು ನಡೆವುದೆ ಸಾಕಾಗಿ ಬಿಡುತ್ತಿತ್ತು. ಕಿಟ್ಟಿ ಏನೋ ಅವಸರವೆನ್ನುವಂತೆ ಕೆಸರು ಚಿಮ್ಮಿಸುತ್ತ ಚಡ್ಡಿ ಅಂಚಿಗೆ ಅದರ ಕರೆ ಕಟ್ಟುವುದನ್ನು ಗಮನಿಸದೆ ನಡೆಯತೊಡಗಿದ.

ಊರಿನ ಎಲ್ಲ ಕೇರಿಯ ಬೀದಿಗಳು ಬಂದು ಕೂಡುವ ಚಾವಡಿ ಚೌಕದಲ್ಲೆ ಗುರುಬಸವನ ಅಂಗಡಿ. ಸುತ್ತಮುತ್ತಿನ ಹಳ್ಳಿಯಿಂದ ಸಾಮಾನಿಗೆ ಬಂದಿದ್ದ ಜನ ಮಳೆ ಬಂದುಬಿಡುತ್ತದೆಂದು ಆತುರ ಮಾಡುತ್ತಿದ್ದರು. ಅವರ ಗುಂಪಿನಿಂದ ಪರಿವಾರದ ಚಾಮ ಗೋಣಿಚೀಲದ ಕೊಪ್ಪೆ ಹಾಕಿಕೊಂಡು ಸೀಮೆಎಣ್ಣೆ ಶೀಶೆ ಹಿಡಿದು ಹೊರಗೆ ಬಂದವನೆ ದಾಪುಗಾಲು ಹಾಕುತ್ತ ಹೊರಟ್ಟಿದ್ದು ಕಂಡುಕಿಟ್ಟಿ ತಟ್ಟನೆ ಕೂಗಿದ. ಚಾಮ ತಿರುಗಿ ನೋಡಿ 'ಬನ್ನಿ ಕಿಟ್ಟಪ್ಪ ಕಳ್ಳಟ್ಟಿ ಚೆನ್ನಮಲ್ಲಪ್ಪರ ಜಗಲಿಮ್ಯಾಗೆ ನಿಮ್ಮ ಅಯ್ಯೋರು ಕೂತವ್ರೆ' ಎಂದು ಕೊಪ್ಪೆ ಹಗಲಿಂದ ತಲೆಗೆ ವರ್ಗಾಯಿಸಿ ಹೆಜ್ಜೆಯ ಬೀಸನ್ನು ಕಡಿಮೆ ಮಾಡಿದ. ಚನ್ನಮಲ್ಲಪ್ಪನವರನ್ನು ಕಿಟ್ಟಿ 'ಮಾವಯ್ಯ' ಅಂತ ಕರೆಯುತ್ತಿದ್ದ. ಅಜ್ಜ ಇಲ್ಲಿಗೆ ಬಂದಾಗಲೆಲ್ಲ ಅಲ್ಲೆ ಕೂತು ಮಾತಾಡುತ್ತಿದ್ದರು. ಎಷ್ಟೋಸಲ ಮಾವಯ್ಯ ಕರೆದು ತಿಂಡಿ ಕೊಟ್ಟಿದ್ದರು. ಅವರ ಹಟ್ಟಿ ಮುಂದೆ ಹಾದು ಹೋಗುವಾಗಲೆಲ್ಲ ಅತ್ತ ಕಣ್ಣು ಹಾಯಿಸದೆ ಕಿಟ್ಟಿ ಹೋಗುತ್ತಿರಲಿಲ್ಲ. ಕಾಯಿಲೆ ಅಂತ ಅವರು ಮೈಸೂರಿಗೆ ಹೋದದ್ದೇ ಬಂದೇ ಇರಲಿಲ್ಲ. ದಿನವೂ ಇವತ್ತು ಬಂದಾರೇನೋ ನಾಳೆ ಬಂದಾರೇನೋ ಅಂತ ನೋಡಿ ನೋಡಿ ಸಾಕಾಗ್ಬಿಟ್ಟಿತ್ತು. ಯಾರಾದರೂ ಕೂತೇ ಇರುತ್ತಿದ್ದ ಅವರ ದೊಡ್ಡ ಜಗುಲಿಗಳು ಬಣಬಣ ಅನುಸುತ್ತಿದ್ದವು. ಅವರ ಹೆಂಡತಿಯನ್ನ 'ಯಾವಾಗ ಬತ್ತಾರೆ ಮಾವಯ್ಯ' ಅಂತ ಕೇಳಿಬಿಡಬೇಕೆನ್ನಿಸಿದರೂ ಯಾಕೋ ಅವರನ್ನು ಕಂಡದ್ದೇ ಮಾತು ಬರುತ್ತಿರಲಿಲ್ಲ. ಅವರನ್ನು ಕಂಡರೆ ಯಾಕೋ ಭಯ. ಆಗೀಗ 'ದೇವ್ರಂತ ಮನಸ್ರು ಮಲ್ಲಪ್ಪ, ಅಂತವ್ರಗೆ ಈ ರಾಕಾಸ ತಾಯಿ ಸಿಕ್ಕಿದ್ಲು' ಅಂತಲೋ, ಇಲ್ಲ 'ಅವಳು ಬುಡಿ ಬೇವನಹಟ್ಟಿ ಕಾಳವ್ವನೆ' ಅಂತಲೋ ಜನ ಅನ್ನುತ್ತಿದ್ದುದು ಕೇಳಿದ ಕಿಟ್ಟಿಗೆ ಅವರು ತುಂಬಾ ಕೆಟ್ಟವರೆನ್ನಿಸಿಬಿಟ್ಟಿತು.

ಇದೀಗ ಚಾಮ ಅಜ್ಜಯ್ಯ ಅವರ ಹಟ್ಟಿ ಹತ್ರ ಕೂತವ್ರೆ ಅಂದರೆ ಮಾವಯ್ಯ ಬಂದಿರಬೇಕೆಂದು ಊಹಿಸಿದ ಕಿಟ್ಟಿ ಚಾಮನನ್ನು ಕೇಳಿದ. ಚಾಮ 'ಬಂದವ್ರೆ' ಅಂತ ಉದ್ದವಾಗಿ ಉಸಿರು ಬಿಟ್ಟ. ತುಂಬಾ ವಿಚಿತ್ರವೆನಿಸಿತು. ವಾಜರ ತಮ್ಮಣ್ಣನ ಹಟ್ಟಿ ತಿರುವು ದಾಟಿದ ಕೂಡಲೇ ಕಾಣಿಸುವ ಹಟ್ಟಿ ಮುಂದೆ ಸುಮಾರು ಜನರ ಗುಂಪೇ ಕೂಡಿತ್ತು. ಕಪ್ಪು ಬಣ್ಣದ ಆಗ ಕಂಡಿದ್ದ ಕಾರು ಅಲ್ಲಿಯೇ ನಿಂತಿದ್ದು ಕಂಡುದೇ ಯಾಕೋ ಕಿಟ್ಟಿಯ ಎದೆ ಧಸಕ್ಕೆಂದಿತು. ಸ್ಕೂಲಿನಲ್ಲಿದ್ದಾಗ ಹೋದ ಕಾರು ಇಲ್ಲಿಗೇ ಬಂದು ಬಿಟ್ಟಿದೆ? ಅವನೆ, ಬೆಳಿಗ್ಗೆ ಬರುತ್ತಾನೆ ಅನ್ನಿಸಿದ್ದವನೆ ಈ ಕಾರಲ್ಲೆ ಬಂದು ಬಿಟ್ಟಿದ್ದರೆ?

ಹಟ್ಟಿಯ ಸಮೀಪ ಬಂದಾಗ ತುಂಬ ಜನ ಹಟ್ಟಿಯೊಳಗೆ ಹೋಗಿ ಬರುತ್ತಿದ್ದರು. ಅಜ್ಜಯ್ಯ ಜಗುಲಿಯಲ್ಲಿ ಕಾಣಿಸಲಿಲ್ಲ. ಸ್ವಲ್ಪ ಹೊತ್ತು ಹಾಗೆ ನಿಂತಿದ್ದ ಕಿಟ್ಟಿ ಮೆಲ್ಲಗೆ ಹಟ್ಟಿಯೊಳಗೆ ನಡೆದ. ಅಜ್ಜಯ್ಯ ಅಂಗಳದ ಮೂಲೆ ಕಂಬಕ್ಕೊರಗಿ ನಿಂತಿದ್ದರು. ಹಜಾರದ ಮಂಚದ ಮೇಲೆ ಯಾರೋ ಮಲಗಿದಂತಿತ್ತು, ಸುತ್ತೆಲ್ಲ ಸುಮಾರು ಜನ ಗೋಡೆ ಕಟ್ಟಿದ್ದರು. ಅವರ ನಡುವೆ ತಲೆ ತುರುಕಿದ ಕಿಟ್ಟಿಯ ಕಣ್ಣಿಗೆ ರಪ್ಪನೆ ಮಂಚದ ಕಾಲು ಬುಡಕ್ಕೆ ಚಾಚಿಧ ಬಿಳುಚಿ ಸೆಟೆದುಕೊಂಡಿದ್ದ ಪಾದಗಳು ಕಾಣಿಸಿದವು. ಕಂಡುದೆ ಬೆಚ್ಚಿ ತಲೆ ಹೊರಕ್ಕೆಳೆದು ಅಜ್ಜಯ್ಯನ ಹತ್ತಿರ ನಡೆದ. ಅಜ್ಜಯ್ಯನ ಕಣ್ಣಲ್ಲೂ ನೀರು ಬಟ್ಟಾಡುತ್ತಿದ್ದುದನ್ನು ಕಂಡು ಕಿಟ್ಟಿಗೆ ಕಸಿವಿಸಿಯಾಗಿ ಇದೆಲ್ಲ ಏನಂತ ಅರ್ಥವಾಗದೆ ಇನ್ನೊಮ್ಮೆ ಮಂಚದ ಕಡೆ ನಿಂತಲ್ಲೆ ಎಟುಕಿಸಿ ನೋಡತೊಡಗಿದ. ತಟ್ಟನೆ ಅದೇ ಆಂಗಾತ ಸತ್ತು ಬಿದ್ದಿದ್ದ ಮೀನಿನ ಹೊಟ್ಟೆಯ ಹಾಗೆ ಬಿಳುಚಿಕೊಂಡು ಸೆಟೆದಿದ್ದ ಪಾದಗಳು. ಯಾರವೆಂದು ನೋಡಿಬಿಡುವ ಎಂದು  ಕೊಳ್ಳುತ್ತಿದ್ದಂತೆ. ಅವು ಮಾವಯ್ಯ ಅವರವೇ ಆಗಿ ಬಿಟ್ಟಿದ್ದರೆ? ಭಯವಾಯಿತು. ಹಾಗೇಕೆ ಬಿಳಿಚಿ ಸೆಟೆದುಕೊಂಡು ಬಿಟ್ಟಿವೆ? ಯಾಕೋ ಭಯ ಹೆಪ್ಪುಗಟ್ಟುತ್ತ ನಿಂತಲ್ಲೆ ನಡುಕ ಬಂತು. ಅಂಗಿಯ ಅಂಚು ಹಿಡಿದು ನಡುಗುತ್ತಿದ್ದ ಕಿಟ್ಟಿಯನ್ನು ಅಜ್ಜಯ್ಯ 'ಬಾ ಎದುರ್ಕೊಂಡೀಯ ಮತ್ತೆ' ಎಂದು ಹಟ್ಟಿ ಹೊರಗೆ ಕರೆತಂದರು.

ಹೊರಗೆ ಬಂದುದೆ ಹಟ್ಟಿ ಮುಂದೆ ನಿಂತಿದ್ದ ಕಾರು ಆದಾಗಲೆ ಕರ್ರಗೆ ಹೊಗೆಯನ್ನು ಬುಗಬುಗ ಉಗುಳುತ್ತ ಕಿವಿಚಿಟ್ಟಾಗುವಂತೆ ಶಬ್ದ ಮಾಡುತ್ತ ಬೀದಿಯ ಕೆಸರನ್ನು ಎರಡು ಕಡೆಗೂ ಚಿಮ್ಮಿಸುತ್ತಹುಣಿಸೆಮರದ ಓಣಿಗೆ ಇಳಿದಾಗ ಅದು ಹಾಗೇಯೇ ತಮ್ಮ ಊರಕಡೆಗೇ ಹೊರಟಿತೇನೋ ಅನ್ನಿಸಿತು ಕಿಟ್ಟಿಗೆ. ...

ತಾವುಬರುವುದನ್ನೇ ಕಾಯುತ್ತಿದ್ದ ಗಾಡಿ ಮೂಕಿ ಮೇಲೆ ಕೂತಿದ್ದ ಚಾಮ ಕೊಪ್ಪೆ ತಲೆಗೇರಿಸಿ 'ಮಳೆ ಭಾರಿ ಕಾವಾಗದೆ ಗೌಡ್ರೆ, ದಯ್ಮಳೆ ಬಂದ್ರೂ ಬತ್ತೆ ಗೊರಗಿಲ್ಲವಾ' ಅಂದ. ಅಜ್ಜಯ್ಯ 'ನಡಿಯೋ ಅಲ್ಲಿ ಆಚಾರ್ರಿ ಕುಲುಮೆ ಉಟ್ಟಿತವು ಇಟ್ಟಿವ್ನಿ' ಎಂದು ಕೆರೆ ಓಣಿಯ ಕಡೇ ಮನೆಯಾಗಿದ್ದ ಅಂಕನಹಳ್ಳಿ ಆಚಾರಿ ಕುಲುಮೆ ಹಟ್ಟಿಗೆ ಬಂದಾಗ ಕುಲುಮೆ ತಿದಿ ಒತ್ತಿದ್ದಾಗೆಲ್ಲ ಬೊರ್ರನೆ ಮೊರೆಯುತ್ತ ಚಟಪಟ ಕಿಡಿ ಹಾರುತ್ತ ಉರಿಯುತ್ತಿದ್ದ ಬೆಂಕಿಯಲ್ಲಿ

ಗುಳ ಕೆಂಪಗೆ ಕಾದು ಗಣಗುಡುತ್ತಿತ್ತು. ಕೊಟ್ಟಿಗೆಯಲ್ಲಿ ಕೂತಿದ್ದವರು ಅಜ್ಜ ಬಂದುದಕ್ಕೆ ಎದ್ದು ನಿಂತೇ ಇದ್ದರು. ಆಚಾರಿ ಚಿಮಟಿಗೆಯಲ್ಲಿ ಗುಳ ಹಿಡಿದು ಸುತ್ತಿಗೆಯಿಂದ ಬಡಿದು ತೊಟ್ಟು ಮಾಡುವಾಗ ಕೆಂಪಗೆ ಕಬ್ಬಿಣದ ಚೂರು ಸಿಡಿಯುವುದನ್ನೆ ಕಿಟ್ಟಿ ದುರುಗುಟ್ಟಿ ನೋಡುತ್ತ ನಿಂತ. ಕೆಂಪಗಿದ್ದ ಗುಳ ಹಾಗೆ ಕರಗ್ರಾಗಿ ಬಿಟ್ಟ ಮೇಲೆ ಮತ್ತೆ ಅದನ್ನು ಕುಲುಮೆಯೊಳಗಿಟ್ಟು ಎದ್ದು ಹೋಗಿ ಬಾಯಲ್ಲಿ ತುಂಬಿದ್ದ ಕವಳ ಪಿಚಕ್ಕನೆ ಉಗಿದು ಬಂದು 'ಅಲ್ಲ ಗೌಡ್ರೆ ಮಲ್ಲಪ್ಪೋರು ಯಂಗಿದ್ದಾಳು. ಯಂಗಾಗ್ಬುಟ್ಟವರೆ! ಅಂಗೆ ರಸಾನೇ ಇಂಡಾಕ್ಬುಡ್ತದೆ ಅಲ್ಲ ಅದೆಂತ ಕಾಯಿಲೇ ಅಂತಿನಿ! ಉಳಿಯೊಕಿಲ್ಲ ಅಂತ ಮೈಸೂರಿಂದ್ಲೆ ತಂದ್ಬುಟ್ಟವ್ರೆ ಅಂದ್ರು' ಅನ್ನುತ್ತ ಅಜ್ಜ ಕೂರಲು ಮೋಟುಗೋಡೆ ಮೇಲಿದ್ದ ಹಲಗೆ ತುಂಡನ್ನು ತಂದಿಡುತ್ತಿದ್ದ ಹಾಗೆ ಅಜ್ಜಯ್ಯ 'ಯಾರು ತಾನೆ ಸಾಸ್ವತ ಬುಡು ಆಚಾರಿ. ಎಲ್ಲಾರು ಒಂದಿನ ಅವನು ಬಂದು ಕರದ ಅಂದ್ರೆ ಮುಗೀತು' ಎಂದವರೆ ಹಲಸಿನ ಎಲೆಯಲ್ಲಿ ತಾವೆ ಕಟ್ಟಿದ್ದ ಹೊಗೆ ಬತ್ತಿ ಹತ್ತಿಸಿಕೊಂಡು-'ಬತ್ತೀನಿ ಆಚಾರಿ, ಭಾರಿ ಮಳೆನೆ ಬರಂಗದೆ ನಮ್ದೂ ಬ್ಯಾರೆ ಅದೆ ಅಂದವರೆ ಗೊರಗನ್ನೆತ್ತಿ ತಲೆಮೇಲೆ ಕವುಚಿಕೊಂಡು ಕಿಟ್ಟಿಯ ಕೈಹಿಡಿದು ಹೊರಟೇ ಬಿಟ್ಟರು. ಕಿಟ್ಟಿಗೆ ಮತ್ತೆ ಸೋಜಿಗ. ಹೊತ್ತಾರೆ ತನಗೆ ಅನ್ನಿಸಿತ್ತು. ಅದನ್ನೇ ಮತ್ತೆ ಈಗ ಅಜ್ಜಯ್ಯ ಅಂದಿದ್ದು? ಅವರಿಗೂ ಅದೇ? ಬೆಳಗಿನಿಂದ ಒಳಗಿಂದಒಳಗೆ ಕಟ್ಟಿಕೊಳ್ಳುತ್ತಿದ್ದ ಭಯ ಬಿಗಿಯತೊಡಗಿತು.

ಮಳೆ ಕಾವಿಗೆ ಬೆದರಿದ ಆಡು ದನಗಳ ಹಿಂಡು ಓಣಿ ತುಂಬ ನುಗ್ಗಿ ಬರತೊಡಗಿತ್ತು. ದನಕಾಯುವ ಐಕಳ 'ಅಲಲ.....ವದಾ.....ಒಓಕೀ! ಎಂಬ ಕಾಕು ಓಣಿಯುದ್ದಕ್ಕೂ ಇಡುಗಿತ್ತು. ಓಣಿ ದಾಟಿ ಕೆರೆ ಕೋಡಿಯ ತೋಪಿಗೆ ಬಂದಾಗ ಸಣ್ಣನೆ ಹನಿ ಸಿಡಿಯತೊಡಗಿದವು. 'ವಸಿ ಚುರುಕಾಗಿ ನಡಿ ಮೊಗ, ಯಾಕೋ ಮೋಡಾನೆ ಇಸ್ಕಂಡು ಬೀಳ ಅಂಗೆ ಕಾಣ್ತದೆ' ಎಂದು ಚೂಟಾಗಿ ಹೆಜ್ಜೆ ಹಾಕುತ್ತ ಬುಸ ಬುಸ ಹೊಗೆ ಬತ್ತಿಯ ಹೊಗೆ ಬಿಡುತ್ತ ನಡೆಯುತ್ತಿದ್ದ ಅಜ್ಜನ ಜೊತೆ ಕಿಟ್ಟಿ ಮೆಲ್ಲಗೆ ಓಡಲೇ ಬೇಕಾಯಿತು. ಸಿಡಿಯುತ್ತಿದ್ದ ಹನಿಗಳು ಏರಿ ಮೇಲೆ ಬಂದಾಗ ಮತ್ತೆ ನಿಂತವು. ಜಿಡಿಯಿಂದಾಗಿ ಏರಿಯ ಜಿನುಗು ಮಣ್ಣು ತಪ್ಪು ಹೆಜ್ಜೆ ಇಟ್ಟರೆ ಸಾಕು, ಸರನ್ರೆ ಜಾರಿ ಬಿಡುತ್ತಿತ್ತು. ಜಾಲದ ಮರದಡಿಗೆ ಬಂದಾಗ ಮನಗನಹಳ್ಳಿ ಪಟೇಲರು ಸಿಕ್ಕಿದ್ದೆ ಮಳೆ ಗದಗುಡುವುದನ್ನು ಗಮನಿಸದೆ ಅಜ್ಜಯ್ಯ ಮಾತಾಡುತ್ತ ನಿಂತು ಬಿಟ್ಟರು. 'ಮಲ್ಲಪ್ಪ ಉಳಿಯಂಗೆ ಕಾಣಾಕಿಲ್ಲ ಪಟೇಲ್ರೆ. ಈಗ್ಲೋ ಆಗ್ಲೋ. ನೀವೇನೇ ಅನ್ನಿ ಬಡ್ಡಿಮಗಂದು ಒಳರೋಗಕ್ಕಿಂತ ಕೆಟ್ಟ ಇನ್ನಿಲ್ಲ ಬುಡಿ ಪಟೇಲ್ರೆ' ಎಂದ ಅಜ್ಜಯ್ಯನ ಮಾತಿಗೆ ಪಟೇಲರು 'ಅಲ್ಲ ಗೌಡ್ರೆ ಮಲ್ಲಪ್ಪನ ಯೆಡ್ತಿ ನೋಡಿದ್ರ ಅಂಗೆ. ಇರೋ ಒಬ್ಬು ಮಗ್ಳು ಅಂತ ಆವಯ್ಯ ಆಪಾಟಿ ಮಾಡ್ದ. ಕಡೇಲಿ ಅವಳು ಅಂಗಾಗ್ಬುಟ್ಲು ಅಂದ್ರೆ. ಅಂಥಾ ಛಲ ಮಾಡ್ಬಾರ್ದು. ಹೋಗ್ಲಿ ಈಗಾದು ಬಂದ್ಲಂತ' ಎಂದು ಕೇಳಿದೊಡನೆ ಅಜ್ಜಯ್ಯ ಸ್ವಲ್ಪ ತಡೆದು 'ಇಲ್ಲ ಪಟೇಲ್ರೆ ಆಸ್ಪತ್ರೆಗೆ ತಂದಾಕವ್ರೆ ಅಂತ ಸುದ್ದಿ ಕೇಳಿದ್ರೂ ಒಂದೇ ಸಲ ಈ ಯೆಣ್ಣು ಅತ್ಲಾಗೆ ಮೊಕಾನೆ ಆಕ್ನಿಲ್ಲವಂತೆ' ಎಂದು ನಿಟ್ಟುಸಿರು ಬಿಟ್ಟು 'ಸರಿ ನಡಿರಿ ಮಳೆ ಬಂದ್ಬುಡಂಗದೆ' ಎಂದು ಹೊರಟಾಗ ಕಿಟ್ಟಿಗೆ ಸದ್ಯ ಮುಗಿಯಿತಲ್ಲ ಅನ್ನಿಸಿದರೂ ಗಕ್ಕನೆ 'ಮಾವಯ್ಯನ ಮಗಳು' ಎಂಬ ಸುದ್ದಿ ಸಿಕ್ಕಿಕೊಂಡಿತು. ಅವನೆಂದೂ ಅವಳನ್ನು ನೋಡಿದ್ದಿಲ್ಲ. ಕುತೂಹಲ ಉಕ್ಕಿ ಅವಳು ಎಲ್ಲಿಗೆ ಹೋಗಿಬಿಟ್ಟಳು? ಮಾವಯ್ಯನನ್ನು ಬಿಟ್ಟ ಯಾಕೆ? ಎಷ್ಟು ಒಳ್ಳೆಯದು ಮಾವಯ್ಯ? ಯಾಕೆ ಬಂದೇ ಇಲ್ಲಂತೇ? ಈ ರಾತ್ರಿಯೇ ಬಂದು ಬಿಟ್ಟರೆ?..

ಏರಿ ಮುಗಿದು ಹುಣಿಸೇ ಮರದ ಓಣಿಗೆ ಇಳಿದು ಬಂದಾಗ ಮತ್ತೆ ಹನಿಯಿಡಲಾರಂಭಿಸಿತು. ಕಿಟ್ಟಿ ಓಣಿಯ ಉದ್ದಕ್ಕೂ ಎಲ್ಲಾದರೂ ಕಾರಿನ ಚಕ್ರದ ಗುರುತು ಕಂಡೀತೆ ಎಂದು ಅರಸಿದ. ಹಿಂಡು ಹಿಂಡು ದನಕರುಗಳ ಹೆಜ್ಜೆ ಗುರುತುಗಳೇ ದಟ್ಟಯಿಸಿ ಎಲ್ಲೂ ಚಕ್ರದ ಗುರುತು ಕಾಣಿಸಲಿಲ್ಲ. ಮೆಲ್ಲಗೆ ಮುಸುಕಾಡುತ್ತಿದ್ದ ಮೋಡಗಳು ಈಗ ಇದ್ದಕ್ಕಿದ್ದ ಹಾಗೆ ಗುದ್ದಾಡ ತೊಡಗಿದವು. ಓಣಿಯ ಇಬ್ಬದಿಗೂ ದೆವ್ವದ ಹಾಗೆ ಬೆಳೆದು ನಿಂತಿದ್ದ ಕಳ್ಳಿ ಬೇಲಿ ಕತ್ತಲನ್ನು ಕಕ್ಕುತ್ತಿತ್ತು. ಗಾಳಿಯೇ ಸುಳಿಯದ ಓಣಿಯಲ್ಲಿ ಉಸಿರು ಕಟ್ಟಿದಂತಾಗಿ, ಹುಣಿಸೆ ಮರದಡಿಗೆ ಬಂದಾಗ ದೊಪ್ಪನೆ ಕತ್ತಲೆ ತಮ್ಮ ತಲೆಯ ಮೇಲೆಯೆ ಹರಿದು ಬಿದ್ದಂತಾಗಿ ಕಿಟ್ಟಿ ಬೆಚ್ಚಿದ್ದೆ ಅಜ್ಜಯ್ಯನ ಗೊರಗಿನೊಳಕ್ಕೆ ಹುದುಗಿಕೊಂಡ.

ಹಾಳು ಹನುಮಂತರಾಯನ ಗುಡಿಯ ಪಕ್ಕದ ತೋಪಿನ ಹತ್ತಿರ ಬಂದಾಗ ಬಾವಲಿಗಳ ಕೀಚುದನಿ, ಪಟಪಟ ರೆಕ್ಕೆ ಬಡಿವ ಸದ್ದಿನೊಡನೆ ಮಳೆಯೂ ಪಟಪಟ ಸಿಡಿಯತೊಡಗಿತ್ತು. ತಿಮ್ಮಕ್ಕನ ಹಿತ್ತಲು ದಾಟಿ ಅಂಕದ ಬೇವಿನ ಮರದಡಿ ಬಂದಾಗ ದೊಡ್ಡನಸೆ ಕಾಡಿಂದ ದಡೆಗುಟ್ಟುತ್ತ ಬರುತ್ತಿದ್ದ ದನಕರುಗಳಿಗೆ ಹಾದಿ ಬಿಟ್ಟು ಮರದ ಬುಡಕ್ಕೆ ಒರಗಿ ನಿಂತ ಅಜ್ಜಯ್ಯನ ಗೊರಗಿನೊಳಗೆ ಹುದುಗಿಕೊಂಡಿದ್ದ ದೇಹವನ್ನು ಮೆಲ್ಲಗೆ ಅನಾವರಣ ಮಾಡಿದ ಕಿಟ್ಟಿ ತಮ್ಮ ಮನೆ ಮುಂದೆ ಏನಾದರೂ ನಿಂತಿದೆಯೆ ಅಂತ ನೋಡಿದ. ಬೇಸಿಗೆಯಲ್ಲಿ ನೀರು ತುಂಬಿ ತರುವ ಮುರುಕಲು ಪೀಪದ ಗಾಡಿ ಮಾತ್ರ ಹಾಗೆ ನಿಂತಿತ್ತು. ಮತ್ತೇನೂ ಕಾಣಿಸಲಿಲ್ಲ. ಯಾರೋ ಏನೋ ಅಟ್ಟಿಸಿಕೊಂಡು ಬರುತ್ತಿರುವಂತೆ ಅವರಿಂದ ತಪ್ಪಿಸಿಕೊಳ್ಳಲೆಂಬಂತೆ ಕಿರುಚುತ್ತ ದನಗಳನ್ನು ದಬ್ಬುತ್ತ ಬಂದ ಆಳುಮಕ್ಕಳು ಮರದಡಿ ನಿಂತ ಅಜ್ಜಯ್ಯನನ್ನು ಕಂಡವರೆ ತಟ್ಟನೆ ತಡೆದು ಕೊಟ್ಟಿಗೆಯತ್ತ ದನಗಳ ಹಿಂದೆ ಮೆಲ್ಲಗೆ ತೆವಳಿದರು.

ತೋಟದ ಕೆಲಸಕ್ಕೆ ಹೋಗಿದ್ದ ಆಳುಗಳಿನ್ನೂ ಹಟ್ಟಿಗೆ ಬಂದಿರಲಿಲ್ಲ. ಕವುಚಿಕೊಂಡಿದ್ದ ಗೊರಗನ್ನು ತೆಗೆದಿಡದೆ ಅಂಗಳದಲ್ಲಿ ನಿಂತಿದ್ದ ಅಜ್ಜಯ್ಯ ಕಾಲು ತೊಳೆಯಲು ನೀರು ತಂದು ನಿಂತ ಅವ್ವನಿಗೆ 'ವಸಿ ಇರು ಮೊಗ, ಅಂಗೆ ತ್ವಾಟದ ಕಡೆ ಕಾಲಾಕ್ಕಂಡು ಬಂದ್ಬುಡ್ತೀನಿ' ಎಂದವರೆ ಹೊರಟೆ ಬಿಟ್ಟಿದ್ದು ಕಂಡು ಕಿಟ್ಟಿ ಅಜ್ಜನಿಗೆ ಕೂಗಿ ಏನೋ ಹೇಳಬೇಕೆಂದಿದ್ದವನು, ಅವ್ವ ತಕ್ಷಣ 'ಬಾರೊ ಕಿಟ್ಟಿ ಕೈ ಕಾಲು ತೊಳ್ಕೊ' ಅಂತ ಕರೆದ ಕೂಡಲೆ ಮಾತಾಡದೆ ಅಂಗಳದ ಬಚ್ಚಲ ಮೂಲೆಗೆ ನಡೆದ. ಅವ್ವ ಹಜಾರದ ದೀಪ ಹತ್ತಿಸಿ ಉಣ್ಣಲು ಇಕ್ಕುವ ತಡಿ ಅಂದರೂ ಕೇಳದೇ ತಾನೆ ತಣಿಗೆ ಎತ್ತಿಕೊಂಡು ಕೋಣೆಗೆ ನಡೆದ, ಅಜ್ಜಿಯಿಂದ ಹೆಚ್ಚು ತುಪ್ಪ ಗಿಟ್ಟಿಸಬಹುದೆಂದು.

ಉಂಡು ಹೊರಗೆ ಬಂದಾಗ ತೋಟದಿಂದ ಅಪ್ಪ ಆಳುಗಳು ಎಲ್ಲಾ ಬಂದಿದ್ದರು. ಎಮ್ಮೆ ಕಾಯಲು ಹೋಗಿ ನೆನೆದು ಬಂದಿದ್ದ ಬೊಬ್ಬರಸಿ ಹಳೆ ಒಲೆ ಮೂಲೆಯಲ್ಲಿ ಬೆಂಕಿ ಉರುಬುತ್ತ ಕೂತಿದ್ದ. ಅಪ್ಪ ಇರದಿದ್ದರೆ ಅಷ್ಟರಲ್ಲಿ ಆಗಲೆ ಕಿಟ್ಟಿ ಅಲ್ಲಿಗೆ ಹಾರಿರುತ್ತಿದ್ದ. ಅಪ್ಪ ಉಣ್ಣಲು ಒಳಗೆ ಹೋಗುವುದನ್ನೆ ಕಾಯುತ್ತ ನಿಂತಿದ್ದ ಹಾಗೆ ಇದುವರೆಗೂ ಸಿಡಿಯುತ್ತಲೆ ಇದ್ದ ಮಳೆ ಅನಾಮತ್ತಾಗಿ ದೊಡ್ಡ ದೊಡ್ಡ ಬಕೆಟ್ಟುಗಳಿಂದ ಎತ್ತಿ ಬಗ್ಗಿಸಿದ ಹಾಗೆ, ಅಂಗಳದ ಮೋತಿಯಿಂದ ಕೆರೆಯ ತೂಬೆತ್ತಿ ಬಿಟ್ಟ ಹಾಗೆ ಸುರಿಯತೊಡಗಿ ಅಂಗಳವೆಲ್ಲ ತುಂಬಿ ನೀರು ಹಜಾರಕ್ಕೂ ಏರತೊಡಗಿತು. ಇಡೀ ಹಟ್ಟಿಯನ್ನೇ ಒಮ್ಮೆ ಎತ್ತಿ ಕುಕ್ಕಿದಂತೆ ಫಳಾರನೆ ಮಿಂಚಿ ಗುಡುಗಿದಾಗ ಎಲ್ಲರಿಗೂ ಜೀವ ಜಲ್ಲೆನಿಸಿತು. ಹಜಾರದ ಮಂಚದ ಮ್ಯೇಲೆ ಕೂತಿದ್ದ ಅಪ್ಪ 'ಆ ಸಿಡ್ಲು ಮಳೆ ಅಂಗಳಕ್ಕೆ ಬಂದು ಮಚ್ಚೊ ಕೊಡ್ಲಿನೋ ತಂಬಾಕೊ ಕಿಟ್ಟಿ' ಎಂದಾಗ ಅಲ್ಲಿ ನಿಂತಿದ್ದ ಅವ್ವ ನಡುಮನೆಯ ಸಣ್ಣದೀಪ ತಂದು 'ಬಾ ಕಿಟ್ಟಿ ದೀಪ ಇಡ್ಕೊ ಕಿರುಮನೇಲಿ ಅವೆ ಕೊಡ್ತೀನಿ' ಎಂದು ಕಿರುಮನೆ ಬಾಗಿಲು ದೂಡಿ ಒಳಗೆ ನಡೆದದ್ದೆ ಕಿಟ್ಟಿ ಇಷ್ಟು ಹೊತ್ತು ಮರೆತುಬಿಟ್ಟಿದ್ದೆಲ್ಲ ನೆನೆಸಿಕೊಂಡು ತಟ್ಟನೆ 'ಅವ್ವ ಅವನು ಬಂದನ' ಅಂತ ಹೇಳಿದ.

'ಯಾವನೋ ಕಿಟ್ಟಿ?'
'ಅವನೆ ಕಣವ್ವ'
'ಅವನೆ ಅಂದ್ರೆ ಯಾರೋ?'
'ನೀನೇ ಯೇಳ್ನಿಲ್ಲವ ವೊತ್ತಾರೆ............'

'ಥೂ ಅನಿಷ್ಟ....... ಬುಡ್ಡು ಅನ್ನು. ಅಂಗೆಲ್ಲ ಮಾತಾಡ್ಬಾರ್ದು ಕಣೊ. ನಡಿ ಆಚೆ' — ಎಂದು ಮಚ್ಚನ್ನು ಎತ್ತಿಕೊಂಡು ಬಂದು ಅಂಗಳಕ್ಕೆ ಬಿಸಾಕಿ ಅಪ್ಪನನ್ನು ಉಣ್ಣಲು ಕರೆದದ್ದೆ, ಅಪ್ಪ ಎದ್ದು ನಿಂತು ಏನೋ ನೆನಪಾದವರಂತೆ, 'ಅಲ್ಲ ಮುದುಕಯ್ಯರು ಬ್ಯಾಡಿ ಇನ್ನ್ಯಾಕೆ ಬನ್ನಿ ಮಳೆ ಬತ್ತದೆ ಅಂದ್ರು ಕೇಳ್ದೆ ಒಂಟೆಬಿಟ್ರು. ಇವ್ರು ಆ ದಯ್ಯಳಿಗೆ ಸಿಕ್ಕಾಕಂಡು ಎಲ್ಲಿ ವದ್ದಾಡ್ತ ಅವ್ರೊ' ಎಂದು ಹಜಾರದ ಸೂರಿಗೆ ಕಟ್ಟಿದ್ದ ಲಾಟೀನು ಬಿಚ್ಚಿಕೊಂಡರೆ 'ನೋಡ್ಕಂಡು ಬರನ ಬನ್ರೊ' ಎಂದು ಆಳುಗಳ ಜೊತೆ ಹೊರಟೇ ಬಿಟ್ಟರು.

ಅಪ್ಪ ಅಂದ ಮಾತಿನ ಗುಂಗಿನಲ್ಲಿ ಇದ್ದ ಕಿಟ್ಟಿ, ಹಳೆ ಒಲೆ ಹತ್ತಿರ ಕಜ್ಜಿ ತುರುಸುತ್ತ ಕೂತ ಬೊಬ್ಬರಸಿಯ ಹತ್ತಿರ ಜಿಗಿದ. ಕತ್ತಲು ಪೂರಾ ಕವಿದುಬಿಟ್ಟಿತ್ತು. ಮಳೆ ಜೋರಾಗುತ್ತಲೇ ಇತ್ತು. ಬೊಬ್ಬರಸಿಯ ಪಕ್ಕವೆ ನಿಂತಿದ್ದ ಕಿಟ್ಟಿಗೆ ಬೆಂಕಿ ಉರಿಯ ಆಚೆ ಅಂಗಳದ ಮೂಲೆಯಲ್ಲಿ ಯಾರೊ ಧುತ್ತನೆ ಬಂದು ನಿಂತುದು ಕಂಡು ಬೆಳಗಿನಿಂದ ಬರುತ್ತಾನೆ ಅನ್ನಿಸಿದ್ದವನು ಬಂದೇ ಬಿಟ್ಟನೇನೋ ಎಂದು ಮೈಮೇಲೆ ಮುಳ್ಳು ನಿಂತು ಕಣ್ಣಗಲಿಸಿ ನೋಡಿದ. ಮಸಕು ಮಸಕು. ಅಲ್ಲಿ ನಿಂತಿದ್ದವನು ಮೆಲ್ಲಗೆ ಬೆಂಕಿಯೊಳಗಿಂದ ನುಗ್ಗಿ ಬಂದು ಪಕ್ಕದಲ್ಲಿ ಕೂತುಬಿಟ್ಟಂತೆ. ಕಿಟ್ಟಿ ಪಕ್ಕ ಒಬ್ಬರಸಿಯನ್ನೆ ಗಾಬರಿಯಿಂದ ನೋಡಿದ. ಕರ್ರಗೆ ದೆವ್ವದ ಹಾಗೆ, ಕುರುಚಲು ಗಡ್ಡ ಮೀಸೆಯ, ಪರ ಪರ ಕಜ್ಜಿ ಕೆರೆಯುತ್ತ ಕೂತಿರುವ ಇವನೆ? ಇವನಲ್ಲ. ಇವನು ದಿನವೂ ಇದ್ದವನೆ. ಯಾವತ್ತು ಇವನು ಬಂದದ್ದು? ಮನೆಯೇ ಇಲ್ಲವಂತೆ. ಇವನಿಗೂ ಹೆಂಡತಿ ಮಕ್ಕಳು ಒಬ್ಬರೂ ಇಲ್ಲವಂತೆ. ಪಾಪ, ಜಗಲಿಯ ಮೇಲೆ ಒಬ್ಬನೇ ಮಲಗಿಬಿಡುತ್ತಾನೆ. ಎಲ್ಲೆಲ್ಲೊ ಸುತ್ತಿ, ಏನೆಲ್ಲ ಕಂಡುಬಂದವನ ಹಾಗೆ ಎಂಥೆಂಥ ಚಂದದ ಕಥೆ ಹೇಳುತ್ತಾನೆ. ಇದ್ದಕ್ಕಿದ್ದ ಹಾಗೆ, ಒಬ್ಬನೇ ಅಳುತ್ತ ಕೂತುಬಿಟ್ಟಿರುತ್ತಾನೆ ಒಂದೊಂದು ಸಲ. ಅದೆಲ್ಲ ನೆನಪಾಗಿ ಕಿಟ್ಟಿಗೆ ಮತ್ತೆ ಅಯ್ಯೋ ಅನ್ನಿಸಿತು. ಆದರೂ ಯಾಕೋ ಈಗ ಅವನನ್ನು ನೋಡಲು ಭಯ. ಅವನ ಕಡೆ ಮೆಲ್ಲಗೆದ್ದು ಕೈಕಾಲು ಬಡಿಯ ತೊಡಗಿದ.

'ಬತ್ತಾನೆ ನೋಡ್ರಯ್ಯ ಕರ್ರಗೆ ಅಂದ್ರೆ ಕರ್ರಗೆ, ಕರಿಮಂಟಿ ಅಂಗೆ ಗೊತ್ರ? ಏನು ಕಾಣಾಕೆ ಇಲ್ಲ. ಕಣ್ಣು, ಮೂಗು ಮುಸುಡಿ ಏನೂ ಕಾಣಾಕೆ ಇಲ್ಲ ಗೊತ್ರ? ಬಂದ ನೋಡ್ಕಳಿ, ಅಂಗೆ ಉದ್ದದ ಹಗ್ಗದ ಸುರುಳಿ ಸುತ್ಕೊಂಡು, ಕ್ವಾಣನ ಮ್ಯಾಲೆ ಧಿಮಾಕ್ಮಾಡ್ಕಂಡು ಯಂಗೆ ಬತ್ತಾನೆ ಗೊತ್ರಾ ಬಂದವನೆ ಮೊಕಗಿಕ ನೋಡಾಕೆ ಇಲ್ಲ ಗೊತ್ರಾ?

ತಗದ, ಬಿಗದ, ವಗದ — ಆಗೋಯ್ತು ಗೊತ್ರ?

ಕಿಟ್ಟಿ ಕಣ್ಣುಜ್ಜಿ ನೋಡಿದ. ಬೊಬ್ಬರಸಿಯಾದರೂ ಭಯವಾಗತೊಡಗಿ: ಅವನ ಪಕ್ಕವೇ ನಿಂತುಬಿಟ್ಟಿದ್ದೇನೆಂದು ಇನ್ನೂ ಭಯವಾಗಿ; ಅವನನ್ನು ಕೂಗಿ ಕರೆಯಬೇಕೆನ್ನುವಷ್ಟರಲ್ಲಿ, ಕೋಣೆಯೊಳಗಿನಿಂದ ವಟಗುಟ್ಟುತ್ತ ಬಂದ ಅಜ್ಜಿ ಬೀದಿ ಕದ ತೆರೆದದ್ದೆ ತಡ ಗಾಳಿ ಬರ್‍ರೆಂದು ಒಳಗೆ ನುಗ್ಗಿತು. ಬೀಸಿದ ಗಾಳಿಗೆ ಹಳೆ ಒಲೆ ಬೆಂಕಿ ಧಗ ಧಗ ಉರಿಯತೊಡಗಿ ಹಟ್ಟಿ ತುಂಬೆಲ್ಲಾ ಬೆಳಕು ತುಂಬಿಕೊಂಡು ಆ ಬೆಳಕಿನಲ್ಲಿ ಯಾರೂ ಕಾಣಿಸದೆ ಕಿಟ್ಟಿಗೆ ಸ್ವಲ್ಪ ನೆಮ್ಮದಿಯೆನಿಸಿತು. ಮಾಡು ಮುಟ್ಟುತ್ತಿದ್ದ ಒಲೆ ಉರಿ ಕಡಮೆ ಮಾಡುತ್ತ ಅವ್ವ ಬೊಬ್ಬರಸಿಯ ಕಡೆ ತಿರುಗಿ ಭಾರತಕ್ಕೆ ತೊಡಗಿತು. ಬೊಬ್ಬರಸಿ 'ಇಲ್ಲ ಕಣ್ರವ್ವ ನೆಲ್ಲುಲ್ಲು ವಂದಿಷ್ಟು ಉರಿ ತಾಕ್ಸಿದರೆ ಸಾಕು' ಆಳುದ್ದ ವುರಿತದೆ' ಅಂದ. ಉರಿ ಕಡಿಮೆಯಾಗುತ್ತಾ ಮತ್ತೆ ಕತ್ತಲು ತುಂಬಿಕೊಳ್ಳುವ ಮೊದಲೆ ಕಿಟ್ಟಿ ಬೊಬ್ಬರಸಿಯ ಹತ್ತಿರದಿಂದ ಎದ್ದು ನಡುಮನೆಯತ್ತ ನಡೆದ.

ಭಯಂಕರ ಗುಡುಗು. ಕಡಮೆಯಾಗದೆ ಸುರಿಯುತ್ತಲೆ ಇರುವ ಮಳೆ, ಅಜ್ಜನನ್ನು ನೋಡಿ ಬರಲು ಹೋದವರು ಸುಮಾರು ಹೊತ್ತಾದರೂ ಬರಲೇ ಇಲ್ಲ. ಅಜ್ಜಿ, ಅವ್ವ, ಬೊಬ್ಬರಸಿ ಹಟ್ಟಿ ಬಾಗಿಲಲ್ಲಿ ನಿಂತು ಇನ್ನೂ ಯಾಕೆ ಬರಲಿಲ್ಲ ಅಂತ ಆತಂಕದಿಂದ ಕಾಯತೊಡಗಿದರು. ಬೊಬ್ಬರಸಿ ಚಳಿಗೆ ಕಟ ಕಟ ಹಲ್ಲು ಕಡಿಯುತ್ತ ಮತ್ತೆ ಪರಪರನೆ ಕಜ್ಜಿ ಕೆರೆದುಕೊಳ್ಳುತ್ತ ಹಳೆ ಒಲೆಯ ಕೆಂಡ ಕೆದಕುತ್ತ ಕೂತ. ಅವ್ವನ ಸೆರಗು ಕಚ್ಚಿನಿಂತಿದ್ದ ಕಿಟ್ಟಿಗೆ ಅವನು ಅಲ್ಲಿ ಹೋಗಿ ಕೂತಿದ್ದೆ ವಾಸಿ ಅನ್ನಿಸಿತು. ಹೊರಗೆ ಏನೊಂದೂ ಕಾಣಿಸದಂತೆ ಕಾಡುಗತ್ತಲೆ. ಮನೆಯ ಮುಂದಿನ ತೆಂಗಿನ ಮರಗಳನ್ನು ಮುರಿದು ಬೀಳುವ ಹಾಗೆ ಮುಲುಕಿಸುತಿಲ್ತುರುವ ಗಾಳಿ. ಎಲ್ಲರ ಮುಖಕ್ಕೂ ಇರಚಲು ಬಡಿದು ಕಿಟ್ಟಿಯ ಜೀವ ಪುಕಪುಕ ಅನ್ನತೊಡಗಿತು. ಬೆಳಗಿನಿಂದ ಬಿಮ್ಮನೆ ಬಿಗಿದುಕೊಂಡಿದ್ದು ಇನ್ನೂ

ಬಿಗಿಯ ತೊಡಗಿತು. ಕಣ್ಣು ಕುಕ್ಕುವ ಹಾಗೆ ಜಗ್ಗನೆ ಮಿಂಚಿದಾಗ ಕತ್ತಲು, ಮಳೆಯಲ್ಲಿ ಮುಳುಗಿದ್ದೆಲ್ಲ ಹಠಾತ್ತನೆ ತೆರಕೊಂಡಂತೆ; ಕಣದ ಹೊಲದ ಬೇಲಿಯ ಹತ್ತಿರ ಯಾರೋ ನಿಂತಂತೆ; ಇನ್ನೊಮ್ಮೆ ಮಿಂಚಿದಾಗ ಅವನೆ ಬೆಳೆಯುತ್ತಿದ್ದಂತೆ; ಮಿಂಚಿದಾಗೆಲ್ಲ ಬೆಳೆಯುತ್ತ ಬೆಳೆಯುತ್ತ ಕಣದ ಹೊಲದ ಬೇಲಿಯಾಚಿನ ಬಸಿವಿ ಮರವಾಗಿ ವಾಲಾಡ ತೊಡಗಿದಂತೆ; ಕಿಟ್ಟಿ ನಿಂತಲ್ಲೆ ಗಡಗಡ ನಡುಗಿದ. ಅವ್ವನ ನಿರಿಗೆಯಲ್ಲಿ ಮುಖ ಮುಚ್ಚಿಕೊಂಡ.

ಕಣದ ಹೊಲದ ಕಡೆಯಿಂದ ಯಾರೋ ದಪದಪ ಓಡಿಬರುವ ಸದ್ದಿಗೆ ಎಲ್ಲರಿಗೂ ಉಸಿರು ಕಟ್ಟಿದಂತಾಗಿ ಓಡುತ್ತ ಬಂದ ಹಲಗ ತೊದಲುತ್ತ ತೊದಲುತ್ತ ಆಗಿಬಿಟ್ಟದ್ದು ಹೇಳಿದ್ದೇ, ಎಲ್ಲರೂ ನಿಂತಲ್ಲೆ ಮಳೆಯ ಸದ್ದನ್ನು ಮೀರಿಸುವ ಹಾಗೆ ಅಳುತ್ತ ತಲೆ ಚಚ್ಚಿಕೊಳ್ಳತೊಡಗಿದ್ದು; ದಿಗ್ಭ್ರಾಂತನಾಗಿ ನಡುಗುತ್ತ ನಿಂತಿದ್ದ ಕಿಟ್ಟಿಗೆ ತಡಕೊಂಡಿದ್ದೆಲ್ಲ ಉಕ್ಕಿದಂತಾಗಿ ತಾನೂ ಕಿಟಾರನೆ ಕಿರುಚತೊಡಗಿದ.

ಅಕ್ಕಪಕ್ಕದವರೆಲ್ಲ ' ಏನಾಯಿತು, ಏನಾಯಿತು' ಅಂತ ಓಡಿ ಬಂದು ಕವಿಚಿಕೊಂಡರು. ಹಟ್ಟಿಯ ಮಾಡೆ ಕಿತ್ತು ಹೋಗುವಂತೆ ಅಳುತ್ತಿದ್ದವರನ್ನೆಲ್ಲ ಕೆಳಗಲ ಹಟ್ಟಿ ಚಿಕ್ಕಜ್ಜ ಗದರಿಸಿ, 'ಸ್ವಲ್ಪ ತಡಿರಿ, ಎಲ್ಲೂ ಕಿರಚಿ ಇನ್ನೂ ಗಾಬರಿ ಮಾಡಬ್ಯಾಡಿ' ಎಂದರು. ಗುಡುಗು, ಮಿಂಚು, ಗಾಳಿ, ಮಳೆ. ಏನೂ ಮಾಡಿದರೂಈ ಯಾರೂ ಅಳು ನಿಲ್ಲಿಸಲಿಲ್ಲ. ಕಣ್ಣು ಮೇಲಾಗಿ ಬಾಯಿ ತೆರಕೊಂಡ ಅಜ್ಜಯ್ಯನ ಗಂಟಲಲ್ಲಿ ಗೊರಗೊರ ಸದ್ದಾಗುತ್ತಿತ್ತು.

ಅಜ್ಜಯ್ಯನನ್ನು ಹೊತ್ತು ಜಗಲಿಗೊಯ್ದನು.

ಹಟ್ಟಿಯೊಳಗಿದ್ದವರೂ ಬಾಯಿ ಬಡಿದುಕೊಳ್ಳುತ್ತ ಜಗಲಿಗೆ ಹೊರಟರು. ಉಡಿಯಲ್ಲಿ ಕಿರುಚುತ್ತಿದ್ದ ಕಿಟ್ಟಿಯನ್ನು ಗಮನಿಸದೆ ಅವ್ವ ಕೂಡ ಅಳುತ್ತ ಜಗಲಿಗೆ ನಡೆದದ್ದೆ ಜೀವಕ್ಕೆ ಬಂದತಾಗಿ ಕೂತಲ್ಲೆ ಮುಳುಗುಟ್ಟುತ್ತ ಸುತ್ತ ನೋಡಿದ.

ಹಟ್ಟಿ ತುಂಬ ದೀಪಗಳಲು ಉರಿಯುತ್ತಿದ್ದರೂ ಕತ್ತಲೆ ತುಂಬಿಕೊಂಡಂತೆ;
ತಾನೊಬ್ಬನೇ ಆಗಿಬಿಟ್ಟಂತೆ;
ಕೂಗಲಾಗದಂತೆ ಉಸಿರೇ ಇಂಗಿಬಿಟ್ಟಂತೆ;
ಎದ್ದು ಓಡಲು ಆಗದೆ ಕಾಲುಗಳು ಬಿಗಿದುಕೊಂಡಂತೆ;
ಎಲ್ಲ ಎಲ್ಲಾ ಭಯಂಕರವಾಗುತ್ತಿದ್ದಂತೆ;
ಹಾಗೆಯೇ ಧಡಕ್ಕನೆ ಆಗ ಕಂಡಿದ್ದವನು ಅಂಗಳದ ನಡುವೆಯೇ ಬಂದು ಉದ್ದಕ್ಕೆ ನಿಂತುಬಿಟ್ಟಂತೆ;

ಉದ್ದನೆ ಕೈ ಚಾಚುತ್ತಿದ್ದಂತೆ;

ಒಳಗಿದ್ದ ಶಕ್ತಿಯೆಲ್ಲ ಬಾಯೊಳಗಿಂದ ಒಮ್ಮೆಲೆ ಉಕ್ಕಿ ಬಂದಂತೆ ತಟ್ಟನೆ 'ಅವ್ವ ಅವನು ಬಂದ, ಬಂದ' ಎನ್ನುತ್ತ ಕಿರುಚಿ;

ಕಿಟ್ಟಿ ಪಜ್ಞೆ ತಪ್ಪಿದ.

(ಶ್ರೀ ಕೃಷ್ಣ ಆಲನಹಳ್ಳಿ ಅವರ 'ತಪ್ತ' ಕಥಾ ಸಂಕಲನದಿಂದ ಆಯ್ದುಕೊಳ್ಳಲಾಗಿದೆ)

## ಅಭ್ಯಾಸ - 1

1. ಇಲ್ಲಿ 'ಆಗಂತುಕ' ಯಾರು?

.......................................................................................................
.......................................................................................................
.......................................................................................................
.......................................................................................................
.......................................................................................................

2. 'ಧುತ್ತನೆ ಇವತ್ತು ಯಾರೋ ಬರುತ್ತಾರೆ? ಎಂದು ಕಿಟ್ಟಿಗೆ ಅನ್ನಿಸುವಂತೆ ಮಾಡುವ ಮತ್ತು ಅದಕ್ಕೆ ಸಂಬಂಧಪಟ್ಟ ವರ್ಣನೆಗಳನ್ನು ಗುರುತಿಸಿ.

.......................................................................................................
.......................................................................................................
.......................................................................................................
.......................................................................................................

3. 'ಕಪ್ಪು ಬಣ್ಣದ ಕಾರು' ಈ ಕಥೆಯಲ್ಲಿ ಏನನ್ನು ಪ್ರತಿನಿಧಿಸುತ್ತದೆ?

4. 'ಮೋಡಗಳು' ಈ ಕಥೆಯ ಸಂದರ್ಭದಲ್ಲಿ ಹೇಗೆ ಮೂಡಿ ಬಂದಿದೆ?

5. ಈ ಕಥೆಯಲ್ಲಿ ಭಯದ ವಾತಾವರಣ ಸೃಷ್ಟಿಸುವ. ದೃಶ್ಯಗಳು ಯಾವುವು?

6. 'ಅವ್ವ ಅಪನು ಬಂದನಾ' ಎಂದು ಕಿಟ್ಟಿ ಕೇಳುವುದರ ಹಿನ್ನೆಲೆ ಏನು?

7. ಬೊಬ್ಬರಸಿಯ ಪಾತ್ರ ಹೇಗೆ ಈ ಕಥೆಯಲ್ಲಿ ಕೆಲಸ ಮಾಡುತ್ತದೆ?

8. ಕಥೆಯ ಕೊನೆಯಲ್ಲಿ 'ಆಗಂತುಕ' ನ ಚಿತ್ರಣ ಹೇಗೆ ಚಿತ್ರಿತವಾಗಿದೆ?

..........................................................................................

..........................................................................................

..........................................................................................

..........................................................................................

..........................................................................................

..........................................................................................

## 13.4 ಸಾರಾಂಶ

ಈ ಅಂಶದಲ್ಲಿ ನಾವು ಆಧುನಿಕ ಕಥೆಯ ರಚನೆ, ಸ್ವರೂಪ ಇವುಗಳ ಬಗೆಗೆ ತಿಳಿದುಕೊಂಡೆವು. ಕಥೆಗಳೂ ಕಾವ್ಯದಂತೆ ಪ್ರತಿಮೆ, ರೂಪಕಗಳನ್ನೊಳಗೊಂಡಿರುತ್ತವೆ. ಇವು ಮುಖ್ಯ ಕಥಾವಸ್ತುವಿಗೆ ಪೂರಕವಾಗಿ ದುಡಿಯುತ್ತಿರುತ್ತವೆ. ಕಥೆಯ ಆರಂಭ, ಅದರ ಬೆಳವಣಿಗೆ ಮತ್ತು ಮುಕ್ತಾಯಕ್ಕೆ ಇರುವ ಚೌಕಟ್ಟು ಸ್ಪಷ್ಟವಾಯಿತು.

'ಆಟ' ಕಥೆಯಲ್ಲಿ ವಯಸ್ಸಾದ ಬುಡಣಸಾಬರು, ಸಾವಿನ ಮನೆಗೆ ಹತ್ತಿರವಾಗಿರುವವರು ಸಾವನ್ನು ತಪ್ಪಿಸಿಕೊಂಡು, ಇನ್ನೂ ಹರೆಯದ ಹುಡುಗನ ಅಕಾಲ ಮರಣ, ಯಮನ ಸಾವಿನ ಆಟದ ಬಗ್ಗೆ ಸೂಚಿಸುವುದಾದರೆ — ಅದಕ್ಕೆ ಪೂರಕವಾಗಿ ಕತ್ತಲೆ — ಬೆಳಕಿನ ಆಟ ಪಠ್ಯದ ಉದ್ದಕ್ಕೂ ನಡೆಯುತ್ತಲೇ ಇರುತ್ತದೆ. ಜೊತೆಗೆ ಆ ಹುಡುಗರು ಆಡುವ 'ಆಟ' ಇಸ್ಪೀಟಾಟ. ಕಥೆಯ ಉದ್ದಕ್ಕೂ ಇದನ್ನು ಗಮನಿಸಬಹುದು.

ಅಂತೆಯೇ ಅಭ್ಯಾಸಕ್ಕಾಗಿ ಆಯ್ದಿರುವ 'ಆಗಂತುಕ' ಕಥೆಯೂ 'ಆಟ'ದ ರೀತಿಯ ವಸ್ತುವನ್ನು ಒಳಗೊಂಡಿದೆ. ಆದರೆ ಅದನ್ನು ಹೇಳಿರುವಲ್ಲಿ ಸಾಮ್ಯವೂ, ವೈದೃಶ್ಯವೂ ಇರುವುದನ್ನು ಗಮನಿಸಬಹುದು. 'ಆಗಂತುಕ' ದಲ್ಲಿ ಘಟನೆಯನ್ನು ಒಬ್ಬ ಬಾಲಕನ ಕಣ್ಣಿಂದ ನೋಡಿರುವುದು ಕೆಲವು ವ್ಯತ್ಯಾಸಗಳನ್ನು ತಂದುಕೊಡುತ್ತದೆ.

## ಅಭ್ಯಾಸಗಳಿಗೆ ಉತ್ತರಗಳು

1. ಈ ಕಥೆಯಲ್ಲಿ ಆಗಂತುಕನಾಗಿ ಬರುವವನು ಮೃತ್ಯುದೇವತೆ.
2. ಕಾಗೆ ಕರೆಯುವುದು 'ಬತ್ತಾನೆ, ಬಂದ್ರೆ ಅವನೇ ಬರಬೇಕು', ಕಪ್ಪು ಕಾರು, ಮತ್ತೆ ಅದೇ ಕಾರು ಕಾಣಿಸುವುದು. ಮಳೆಯ ಕರೀ ಮೋಡ, ಹಾಳು ಹನುಮಂತರಾಯನ ಗುಡಿ, ಬೊಬ್ಬರಿಸಿ ಬೆಂಕಿ ಊದುವುದು. ಕರ್ರ್ಗೆ, ದೆವ್ವದ ಹಾಗೆ ಕುರುಚುಲು ಗಡ್ಡ ಮೀಸೆಯ ವ್ಯಕ್ತಿ. 'ಬತ್ತಾನೆ ನೋಡ್ರಯ್ಯ ಕರ್ರ್ಗೆ ಅಂದ್ರೆ, ಕರ್ರ್ಗೆ, ಕರಿಮಂಟಿ ಅಂಗೆ' ಇತ್ಯಾದಿ.
3. ಕಪ್ಪು ಬಣ್ಣದ ಕಾರು ಈ ಕಥೆಯಲ್ಲಿ ಸಾವನ್ನು ತರುವ ಯಮ ರೂಪದಂತೆ ಕಾಣಿಸಿಕೊಳ್ಳುತ್ತದೆ.
4. ಮೋಡಗಳು ಕರ್ರಗಿದ್ದು ಆಕಾಶದಿಂದ ಭೂಮಿಗೆ ಇಳಿಯುವಂತೆಯೂ, ಕರಿ ಬಣ್ಣವು ಮೃತ್ಯುವಿನ ಸಂಕೇತದಂತೆಯೂ ಕಾಣುತ್ತದೆ.
5. ಕಾಗೆ ಹುಣಸೇಮರ, ಕೊಪ್ಪ ಹಾಕಿಕೊಂಡ ಚಾಮು, ಮಂಚದ ಕಾಲು ಬುಡಕ್ಕೆ ಚಾಚಿದ, ಬಿಳುಚಿ ಸೆಟೆದುಕೊಂಡಿದ್ದ ಯಾರೋ ಮಲಗಿದ್ದ ದೃಶ್ಯ ಅಂಗಾತ ಸತ್ತು ಬಿದ್ದಿದ್ದ ಮೀನಿನ ಹೊಟ್ಟೆ. ಆಚಾರಿ ಕುಲುಮೆಯ ಬೆಂಕಿ ಹತ್ತಿ ಆರುವುದು. ಹಾಳು ಹನುಮಂತರಾಯನ ಗುಡಿ ಇತ್ಯಾದಿ.
6. ಮಿಂಚು, ಮಳೆಯ ವಾತಾವರಣ, ಮತ್ತು ಕತ್ತಲಿನ ಕಿರುಮನೆ ಈ ಅನುಭವವನ್ನೂ ಸೂಚಿಸುತ್ತದೆ.
7. ಬೊಬ್ಬರಸಿ ಕೊಪ್ಪೆ ಹೊದ್ದಿಕೊಂಡಿರುವುದು ಅವ್ಯಕ್ತವಾಗುವ ಯಮ ದೂತರಂತೆ ಕಂಡುಬರುತ್ತಾನೆ.
8. ಹಟ್ಟಿ ತುಂಬ ದೀಪಗಳು ಉರಿಯುತ್ತಿದ್ದರೂ, ಕತ್ತಲೆ ತುಂಬಿಕೊಂಡಂತೆ;
   ತಾನೊಬ್ಬನೇ ಆಗಿಬಿಟ್ಟಂತೆ;
   ಕೂಗಲಾಗದೇ ಉಸಿರೇ ಇಂಗಿಬಿಟ್ಟಂತೆ;
   ಧಡಕ್ಕನೆ ಆಗ ಕಂಡಿದ್ದವನು ಅಂಗಳದ ನಡುವೆಯೇ ಬಂದು ಉದ್ದಕ್ಕೆ ನಿಂತುಬಿಟ್ಟಂತೆ.